## ಕಾವ್ಯ ರಶ್ಮಿ

### ಪರಿವಾರ

ಗಾಯಿತ್ರಿ ರಾಘವೇಂದ್ರ,
ಬೆಟ್ಟಕೊಪ್ಪ, ಶಿರಸಿ

ಕಿಚಪಿಚನೆ ಕೂಗಿ
ಕಲರವವ ಮಾಡಿ
ಮನೆಯೆಲ್ಲ ತಿರುಗಿ
ಸಡಗರದಿ ಹಾಡಿ

ತಂಡ ತಂಡದಲಿ ಬಂದು
ನಗುವನ್ನು ತೇಲಿಸಿ,
ಇಷ್ಟಿಷ್ಟೇ ತಿಂದು
ಹಸಿವನ್ನು ನೀಗಿಸಿ

ಪುಟ್ಟ ಪುಟ್ಟ ಹೆಜ್ಜೆಯಿರಿಸಿ
ಮಕ್ಕಳಂದದಿ ಬಂದು
ಮನಕ್ಕೆಲ್ಲ ಹರುಷವಿರಿಸಿ
ಸಂತೋಷವ ತಂದು

ಎಲ್ಲಿ ಹೋದಿರಿ ಓ
ನಮ್ಮ ಮನೆಯ ಗುಬ್ಬಿಗಳೇ
ಬಂದು ಬಿಡಿ ಮತ್ತೆ
ನಮ್ಮನೆಯ ಅಂಗಳಕೆ
ರಿಂಗಣಿಸುವ ತರಂಗ
ನಿಮ್ಮ ಹೃದಯವ ಸೋಕಿ
ಪುಟ್ಟ ಸಂಕುಲವ ಜುಮ್ಮನೆ ತಾಕಿ

ನಾಶವಾಯಿತೇ ನಿಮ್ಮ
ಗುಬ್ಬಿ ಸಂಸಾರ?
ನಿಮ್ಮನ್ನೇ ಅನುಸರಿಸುತ್ತಿದೆ
ನಮ್ಮ ಪರಿವಾರ

### ನನ್ನೊಳಗೆ

–ಭವ

ಏಕಾಂತದಲ್ಲೆಲ್ಲೋ...
ಕಾಡುವ ದನಿ...
ಯಾವುದೋ ಪಿಸುಮಾತು,
ಮತ್ತಾವುದೊ ಸ್ವರ..
ಯಾರದೋ ಕೇಕೇ... ಮತ್ತಾರದೋ
ಆಕ್ರಂದನ...

ಒಮ್ಮೆ ಕಟ್ಟು ಬಿಚ್ಚಿದ ಅಶ್ವಗಳ
ನಾಗಾಲೋಟದಂತೆ...
ಮತ್ತೊಮ್ಮೆ, ಯಾರೋ ಹಾಕಿದ
ಲಯಬದ್ಧ ತಾಳದಂತೆ..

ಎಷ್ಟೋ ಬಾರಿ.. ಮಲಗಿದ್ದಿದೆ
ಶಪಿಸಿ...,
ಯಾವುದೀ.. ದರಿದ್ರ ದನಿಯೆಂದು..

ಬಹಳ ತಡವಾಯಿತೋ ಏನೋ..
ತಿಳಿದದ್ದು.
ಈ ರೀತಿ ವರ್ತಿಸುವ ಹೃದಯ,
ನನ್ನಲ್ಲೇ... ಇದೆಯೆಂದು...

**ವಿಳಾಸ**

**ರಾಮಚಂದ್ರ ಹೆಗಡೆ ಸಿ.ಎಸ್, "ನೆನಪು" ನಂ.33,(172/3), 3ನೇ 'ಸಿ' ಅಡ್ಡರಸ್ತೆ,**
**ಕತ್ರಿಗುಪ್ಪಾ ಮುಖ್ಯರಸ್ತೆ, ವಿವೇಕಾನಂದನಗರ, ಬೆಂಗಳೂರು – 560 085.**
**ದೂರವಾಣಿ : 9986372503 Email:contact@chaitrarashmi.com,**
**Web: www.chaitrarashmi.com**

**Editor, Printer, Publisher and owned by RAMACHANDRA HEGDE C.S. , No.53, 2nd Floor, Shamsingh Complex, Gandhi Bazaar, Bangalore-560 004. Printed at : CHITRA PRINTERS, 193, Link Road, Malleswaram, Bangalore- 560 003.**



RNI KAR KAN/2006/19109
MAG (3)/NPP/272/2005-06

**ಸೃಜನಶೀಲತೆಯ ಹುಡುಕಾಟದಲ್ಲಿ...................**

ಕನ್ನಡ ಮಾಸಿಕ
ಸೆಪ್ಟೆಂಬರ್ ೨೦೦೮

# ಚೈತ್ರರಶ್ಮಿ

ಸಂಪುಟ: 4
ಸಂಚಿಕೆ: 12

- A RAY OF HOPE



## ಅಪ್ಪಿಕೋ ಚಳುವಳಿಗೆ 25

CHAITRA RASHMI
Kannada Monthly

ಸೃಜನಶೀಲತೆಯ ಹುಡುಕಾಟದಲ್ಲಿ.....

ಚೈತ್ರರಶ್ಮಿ - A RAY OF HOPE

RNI KAR KAN/2006/19109
MAG (3)/NPP/272/2005-06

EDITOR: RAMACHANDRA HEGDE.C.S.

ಸಂಪಾದಕ: ರಾಮಚಂದ್ರ ಹೆಗಡೆ. ಸಿ.ಎಸ್.

| | | | | |
|---|---|---|---|---|
| ಸಂಪುಟ:4 | ಸಂಚಿಕೆ: 12 | ಸೆಪ್ಟೆಂಬರ್ 10, 2008 | ಪುಟ: 16 | ಬೆಲೆ: ರೂ. 5.00 |
| Volume: 4 | Issue: 12 | September 10, 2008 | Pages: 16 | Rs. 5.00 |

# ನಿಮ್ಮೆಲ್ಲರ ಸಂಭ್ರಮಕ್ಕೆ ನಮ್ಮ ಹಾರೈಕೆಯ ಚಪ್ಪಾಳೆ

ನಿಜಕ್ಕೂ ಖುಷಿಯಾಗಿದೆ. ಕಳೆದ ಕೆಲವು ತಿಂಗಳಿಂದ ಎದುರಾದ ಹಲವು ಸಮಸ್ಯೆ, ಸವಾಲುಗಳ ನಡುವೆಯೂ ಕೆಲವು ಸಂಭ್ರಮದ ಕ್ಷಣಗಳು ಮನಸ್ಸಿಗೆ ಮುದನೀಡಿದೆ. ಅಮೇರಿಕದ ಚಿಕಾಗೋದಲ್ಲಿ ನಡೆದ 'ಅಮೆರಿಕ ಕನ್ನಡ ಒಕ್ಕೂಟ' ದ ವಿಶ್ವ ಕನ್ನಡ ಸಮ್ಮೇಳನದ ನಿಮಿತ್ತ ಆಯೋಜಿಸಲಾಗಿದ್ದ ಜಾಗತಿಕ ಮಟ್ಟದ ವೈಚಾರಿಕ ಲೇಖನ ಸ್ಪರ್ಧೆಯಲ್ಲಿ ನಮ್ಮ "ನೂಪುರ ಭ್ರಮರಿ" ಪತ್ರಿಕೆಯ ಸಂಪಾದಕಿ ಮನೋರಮಾ ಬಿ. ಎನ್. ಪ್ರಥಮ ಬಹುಮಾನ ಗಳಿಸಿದ್ದಾರೆ. ಹಾಗೆಯೇ ಸಮ್ಮೇಳನದ ಸ್ಮರಣ ಸಂಚಿಕೆಯ ಲೇಖನ ಸ್ಪರ್ಧೆಯಲ್ಲಿ ನಮ್ಮ ಬಳಗದ ಬರಹಗಾರ್ತಿ ಶ್ರೀಮತಿ ಕಪಿಲಾ ಶ್ರೀಧರ್ ಅವರ ಕಥೆ ಹಾಗೂ ಗೆಳೆಯ ರಫೀಕ್ ಅವರ ಕಥೆ ಆಯ್ಕೆಯಾಗಿದ್ದು ಸ್ಮರಣ ಸಂಚಿಕೆಯಲ್ಲಿ ಪ್ರಕಟಗೊಂಡಿವೆ. ನನ್ನಂತೆಯೇ ಮನೋರಮಾ ಕೂಡಾ ವೃತ್ತಿ ಬದುಕಿನ ಸವಾಲು ಹಾಗೂ ಪತ್ರಿಕೆಯ ಜವಾಬ್ದಾರಿಗಳ ನಡುವೆ ವೈಯಕ್ತಿಕ ಬೆಳವಣಿಗೆ ಹಾಗೂ ಬರವಣಿಗೆಯನ್ನು ಎಲ್ಲಿ ಕಳೆದುಕೊಂಡುಬಿಡುತ್ತಾರೋ ಎಂಬ ಆತಂಕ ನನಗಿತ್ತು. ಆದರೆ ಮನೋರಮಾ 'ನೂಪುರ ಭ್ರಮರಿ'ಯನ್ನು ಒಂದು ವಿಶಿಷ್ಟ ಪತ್ರಿಕೆಯನ್ನಾಗಿ ರೂಪಿಸುತ್ತಿರುವುದರ ಜತೆಗೆ ವೈಯಕ್ತಿಕವಾಗಿಯೂ ಅನೇಕ ಸೃಜನಶೀಲ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಫಲರಾಗಿದ್ದಾರೆ. ಈಗಾಗಲೇ ಹಲವು ರಾಜ್ಯ ಮಟ್ಟದ ಕಥೆ, ಕವನ ಸ್ಪರ್ಧೆಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಮನೋರಮಾಗೆ 'ಅಕ್ಕ' ಸ್ಪರ್ಧೆಯ ಬಹುಮಾನ ಮತ್ತಷ್ಟು ಶಕ್ತಿ ತುಂಬಲಿ ಎಂಬುದು ನನ್ನ ಹಾರೈಕೆ. ಹಾಗೆಯೇ ಕಪಿಲಾ ಶ್ರೀಧರ್ ಮತ್ತು ರಫೀಕ್ ಅವರ ಕಥೆಗಳು ಸ್ಮರಣ ಸಂಚಿಕೆಯಲ್ಲಿ ಪ್ರಕಟಗೊಂಡಿರುವುದು ನನ್ನ ಸಂತಸವನ್ನು ಇಮ್ಮಡಿಗೊಳಿಸಿದೆ. ಇನ್ನು ನನ್ನ ಕಿರಿಯ ಮಿತ್ರ ಆದರ್ಶ ಕೊಂಕೋಡಿ ಅವರ ಒಂದು ಕತೆ 'ಮಯೂರ'ದಲ್ಲಿ ಪ್ರಕಟಗೊಂಡಿದ್ದು, ಇನ್ನೊಂದು ಕತೆಗೆ ಮುಂಬೈನ 'ಅಕ್ಷಯ' ಪತ್ರಿಕೆ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಬಹುಮಾನ ಲಭಿಸಿದೆ. ಇಂಜಿನಿಯರಿಂಗ್ ಪ್ರಥಮ ವರ್ಷದ ವಿದ್ಯಾರ್ಥಿಯಾಗಿರುವ ಆದರ್ಶರ ಸಾಹಿತ್ಯ ಪ್ರೀತಿ, ಬರವಣಿಗೆ ಇನ್ನಷ್ಟು ಶಕ್ತಿಯುತವಾಗಲಿ. ಇನ್ನು ನಮ್ಮ 'ಡೊಂಕೋಕ್ತಿ ಚತುರ' ಗೆಳೆಯ ವಿಶ್ವನಾಥ ಸುಂಕಸಾಳರ 'ಸುಭಾಷಿತ'ಅಂಕಣ ಹೊಸದಿಗಂತ ಪತ್ರಿಕೆಯಲ್ಲಿ, 'ವಕ್ರೋಕ್ತಿ' ಅಂಕಣ ಉತ್ತರ ಕನ್ನಡದ 'ಕರಾವಳಿ ಮುಂಜಾವು' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದೆ. ಚೈತ್ರರಶ್ಮಿ ಬಳಗದ ಮಿತ್ರರಾದ ಸಂಜಯ ಭಟ್, ಎನ್. ವಿ. ವೈದ್ಯ ಹೆಗ್ಗಾರ, ಅನುಶ್ರೀ ಬಂದಾಡಿ, ಕಮಲಾ ಹೆಗಡೆ, ನವೀನ್ ಭಟ್ ಗಂಗೋತ್ರಿ, ಪ್ರಶಾಂತ ಶೆಟ್ಟಿ ಇನ್ನೂ ಮುಂತಾದ ಗೆಳೆಯರ ಕಥೆ, ಕವನ, ಲೇಖನಗಳು ನಾಡಿನ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಈ ಎಲ್ಲ ಗೆಳೆಯರಿಗೆ ಚೈತ್ರರಶ್ಮಿಯ ಶುಭಹಾರೈಕೆಗಳು., ಅಭಿನಂದನೆಗಳು.





"ಶ್ರೀಧರನ್" ಎಂಬ ಕನಸುಗಾರನಿಗೆ ನಮಿಸುತ್ತಾ.....

**ಅಂತರಂಗದಿಂದ**

# ನಿಲ್ಲದಿರಲಿ "ಗುಡ್‌ನ್ಯೂಸ್ ಇಂಡಿಯಾ"




ನಾನು ಇತ್ತೀಚೆಗೆ ಓದಿದ್ದು ವಿಶ್ವೇಶ್ವರ ಭಟ್ಟರ "ಸಂಪಾದಕ ಅಂದ್ರೆ ಗಂಡ ಇದ್ದಂತೆ" ಎಂಬ ಪುಸ್ತಕ. ಭಟ್ಟರು 'ನೂರೆಂಟು ಮಾತು' ಅಂಕಣದಲ್ಲಿ ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಬರೆದ ಹಲವು ಬರಹಗಳ ಸಂಕಲನವಿದು. ಸುದ್ದಿಯೆಂಬ ಭೃಂಗದ ಬೆನ್ನೇರಿ ಹೊರಟ ಪತ್ರಕರ್ತರು, ಪತ್ರಕರ್ತನೊಬ್ಬ ಸೂಕ್ಷ್ಮ ಸಂವೇದನೆಯನು ಕಳೆದುಕೊಂಡಾಗ ಸೃಷ್ಟಿಯಾಗುವ ಅವಾಂತರಗಳು, ಸುಳ್ಳನ್ನೂ ಸತ್ಯದ ತಲೆಯ ಮೇಲೆ ಹೊಡೆದ ಹಾಗೆ ನಿರೂಪಿಸುವ ಟಿ.ವಿ. ಪತ್ರಿಕೋದ್ಯಮ, ಸೆಕ್ಸು, ಕ್ರೈಮ್‌ಗಳ ಕುರಿತ ಮಾಧ್ಯಮಗಳ ಅತಿರಂಜಿತ ನಿರೂಪಣೆ, 'ಬ್ರೇಕಿಂಗ್ ನ್ಯೂಸ್' ಎಂಬ ನ್ಯೂಸೆನ್ಸ್‌ನಿಂದಾಗುವ ಅನಾಹುತಗಳು, ಬೇರೆಯವರ ಮಾನ ತೆಗೆಯುವಲ್ಲಿನ ಅತ್ಯಾಸಕ್ತಿ, ವಿಶ್ವಮಟ್ಟದಲ್ಲಿ ಭಾರತದ ಮಾನ ಕಳೆಯುತ್ತಿರುವ ವಿದೇಶಿ ಪತ್ರಕರ್ತರು, ನಕಾರಾತ್ಮಕ ಸುದ್ದಿಗಳ ವೈಭವೀಕರಣ, ಪತ್ರಿಕೆ, ಪತ್ರಕರ್ತನಿಗಿರಬೇಕಾದ ಆಚಾರ ಸಂಹಿತೆ, ಅಭಿವೃದ್ಧಿ ಪತ್ರಿಕೋದ್ಯಮದ ಅಗತ್ಯತೆಗಳ ಕುರಿತು ವಿವರಿಸಿದ್ದಾರೆ ವಿಶ್ವೇಶ್ವರ ಭಟ್ಟರು. 'ಹೆಂಡತಿಯನ್ನು ಖುಷಿಪಡಿಸುವ ಗಂಡ ಹೇಗೆ ಹುಟ್ಟಿಲ್ಲವೋ ಹಾಗೆಯೇ ಓದುಗರನ್ನು ಸಂತೋಷಪಡಿಸುವ ಸಂಪಾದಕನೂ. ಹೆಂಡತಿಗೆ ಇಷ್ಟವಾಗುವ ಸೀರೆಯನ್ನು ಗಂಡ ತರಲಾರ. ಹಾಗೆಯೇ ಓದುಗ ಇಷ್ಟಪಡುವ ಪತ್ರಿಕೆಯನ್ನು ಸಂಪಾದಕ ಸಹ ಇನ್ನೂ ರೂಪಿಸಿಲ್ಲವಂತೆ. ಹಾಗಾಗಿ ಸಂಪಾದಕ ಅಂದ್ರೆ ಗಂಡ ಇದ್ದಂತೆ' ಎನ್ನುತ್ತಾರೆ ಭಟ್ಟರು. 'ನ್ಯೂಸ್ ಹಂಗ್ರಿ ಪೀಪಲ್' ಗಳ ನ್ಯೂಸೆನ್ಸ್‌ಗಳನ್ನು, ಸಮಕಾಲೀನ ಪತ್ರಿಕೋದ್ಯಮದ ಒಳ ಹೊರಗುಗಳನ್ನು ಅರಿಯಬಯಸುವವರಿಗೆ ಒಳ್ಳೆಯ ಪುಸ್ತಕವಿದು.

ನಾನೀಗ ಬರೆಯಹೊರಟಿರುವುದು ಗುಡ್‌ನ್ಯೂಸ್ ಇಂಡಿಯಾ.ಕಾಮ್ (goodnewsindia.com) ಎಂಬ ನನ್ನ ಇಷ್ಟದ ಒಂದು ಒಳ್ಳೆಯ ವೆಬ್‌ಸೈಟ್‌ನ ಕುರಿತು ಅಷ್ಟೇನೂ ಒಳ್ಳೆಯ ವಿನ್ಯಾಸವನ್ನು ಹೊಂದಿರದ ಆದರೆ ನಿಜಕ್ಕೂ ಹೆಸರಿಗೆ ತಕ್ಕಂತೆ ನೂರಾರು ಒಳ್ಳೆಯ ವಿಷಯಗಳನ್ನು ಒಳಗೊಂಡಿರುವ ವೆಬ್‌ಸೈಟ್ ಇದು. ಡಿ.ವಿ.ಶ್ರೀಧರನ್ ಎಂಬ ತಮಿಳುನಾಡಿನ ಒಬ್ಬ ಕನಸುಗಾರನ ಏಕಾಂಗಿ ಹೋರಾಟದ ಪ್ರತಿಫಲವಿದು. 2000ನೇ ಇಸವಿಯಲ್ಲಿ ಆರಂಭಗೊಂಡ ಈ ವೆಬ್‌ಸೈಟ್‌ನ ಮೂಲಕ ಶ್ರೀಧರನ್ ಭಾರತದ ಕುರಿತು ಸಕಾರಾತ್ಮಕ ದೃಷ್ಟಿಕೋನಗಳನ್ನು ಬೆಳೆಸುವ ಪ್ರಯತ್ನವನ್ನು ಏಕಾಂಗಿಯಾಗಿ ಮಾಡುತ್ತಿದ್ದಾರೆ.

ಸಮಾಜ, ದೇಶದ ಕುರಿತು ಕಾಳಜಿ ಕಳಕಳಿ ಹೊಂದಿರುವ, ಸಮಾಜದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ, ಸಮಾಜದ ಹಿತಕ್ಕಾಗಿ ಶ್ರಮವಹಿಸಿ ದುಡಿಯುತ್ತಿರುವ ಪ್ರಯತ್ನಗಳು ನಿಂತು ಹೋದರೆ ಮನಸ್ಸಿಗೆ ತುಂಬಾ ನೋವಾಗುತ್ತದೆ. 2002–03 ರ ಸಮಯದಲ್ಲಿ ರಾಜೀವ್ ದೀಕ್ಷಿತರ 'ಆಜಾದಿ ಬಚಾವೋ ಆಂದೋಲನ' ಕರ್ನಾಟಕದಲ್ಲಿ ಸೃಷ್ಟಿಸಿದ್ದ ಸಂಚಲನ ಸ್ವದೇಶಿ ಚಿಂತನೆಯ ಕುರಿತು ಅಪಾರ ಭರವಸೆ ಮೂಡಿಸಿತ್ತು. ನಾವೆಲ್ಲಾ ಆಗ 'ಆಜಾದಿ'ಯ ಸಕ್ರಿಯ ಕಾರ್ಯಕರ್ತರಾಗಿದ್ದೆವು. ಹಾಸ್ಟೆಲ್‌ಗಳಲ್ಲಿ, ಕಾಲೇಜುಗಳಲ್ಲಿ ಸ್ವದೇಶಿ ವಸ್ತುಗಳ ಕುರಿತು ಪ್ರಚಾರಾಂದೋಲನ ನಡೆಸಿದ್ದೆವು. ನಂತರದ ದಿನಗಳಲ್ಲಿ ಕಾರಣಾಂತರಗಳಿಂದ ಆಂದೋಲನ

ಕರಗಿಹೋಗಿದ್ದು ನಿಜಕ್ಕೂ ನಿರಾಸೆ ಮೂಡಿಸಿತ್ತು. 'ಗುಡ್ ನ್ಯೂಸ್ ಇಂಡಿಯಾ'ವನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಕುರಿತು ಶ್ರೀಧರನ್ ಬರೆದಾಗಲೂ ನಿಜಕ್ಕೂ ಬೇಸರವಾಯ್ತು.

ಗುಡ್‌ನ್ಯೂಸ್ ಇಂಡಿಯಾ ವೆಬ್‌ಸೈಟ್ ರೂಪಿಸಿದ ಬಗೆಗೆ ಶ್ರೀಧರನ್ ತಮ್ಮ ಅನುಭವಗಳನ್ನು ಹೀಗೆ ಬಿಚ್ಚಿಡುತ್ತಾರೆ "ಮಾಧ್ಯಮಗಳಲ್ಲಿ ಭಾರತದ ಕುರಿತು ನಕಾರಾತ್ಮಕ ಸುದ್ದಿಗಳೇ ವಿಜೃಂಭಿಸುತ್ತಿದ್ದ ಸಮಯದಲ್ಲಿ ಈ ದೇಶದಲ್ಲಿರುವ ಒಳ್ಳೆಯ ವಿಚಾರಗಳನ್ನು ಜನರಿಗೆ ತಲುಪಿಸಬೇಕು ಎಂಬ ಕನಸಿನೊಂದಿಗೆ ಗುಡ್‌ನ್ಯೂಸ್ ಇಂಡಿಯಾದ ಆರಂಭ ಮಾಡಿದೆ. ನನ್ನದು ಒಂದು ಅದ್ಭುತ ಕನಸು ಎಂಬ ಅರಿವಾಗಿದ್ದು ಕೆಲಸ ಆರಂಭಿಸಿದ ಮೇಲೆಯೇ. ಅದಕ್ಕಾಗಿ ನಾನು ಸುದ್ದಿಗಳಲ್ಲಿ ಹುಡುಕಿಕೊಂಡು ದೇಶದ ಅನೇಕ ಹಳ್ಳಿ ಹಳ್ಳಿಗಳಿಗೆ, ಸಣ್ಣಪುಟ್ಟ ನಗರಗಳಿಗೆ ಅಲೆದಿದ್ದೇನೆ. ವೆಬ್‌ಸೈಟ್‌ನ ವಿನ್ಯಾಸ, ನ್ಯೂಸ್ ಅಪ್‌ಲೋಡ್ ಎಲ್ಲವನ್ನೂ ಒಬ್ಬನೇ ಮಾಡಿದ್ದೇನೆ. ನನಗೆ ನಿಜಕ್ಕೂ ಆದ ಆನಂದ, ತೃಪ್ತಿ ಎಂದರೆ ಇಷ್ಟು ವರ್ಷಗಳ ನನ್ನ ಪಯಣದಲ್ಲಿ ನಾನು 'ಭಾರತದ ಬಗ್ಗೆ ನಿಜವಾದ ಶ್ರದ್ಧೆ, ಪ್ರೀತಿ, ಕಾಳಜಿ ಇಟ್ಟುಕೊಂಡು ಲಾಭಕೋರತನದಿಂದ ದೂರವುಳಿದು ಭಾರತದ ಅಭಿವೃದ್ಧಿಗಾಗಿಯೇ ದುಡಿಯುತ್ತಿರುವ ಸಾವಿರಾರು ಜನ ಹಾಗೂ ಸಂಸ್ಥೆಗಳನ್ನು' ಕಂಡಿದ್ದೇನೆ. ಅವರೊಂದಿಗೆ ಒಡನಾಡಿದ್ದೇನೆ. ಗುಡ್‌ನ್ಯೂಸ್ ಇಂಡಿಯಾ ವೆಬ್‌ಸೈಟಿನಲ್ಲಿ ಅಂತಹ ಮಹನೀಯರ ಕುರಿತು ಐನೂರಕ್ಕೂ ಹೆಚ್ಚು ಸುದ್ದಿಗಳನ್ನು ಪ್ರಕಟಿಸಿರುವುದು ನನಗೆ ತೃಪ್ತಿ ತಂದಿದೆ" ಎನ್ನುತ್ತಾರೆ ಶ್ರೀಧರನ್. ವೆಬ್‌ಸೈಟ್‌ಗೆ ಭೇಟಿಕೊಟ್ಟ ಓದುಗರ ಸಂಖ್ಯೆ 30 ಲಕ್ಷ ದಾಟುತ್ತದೆ. ನಿತ್ಯ 30 ಸಾವಿರ ಮಂದಿ ವೆಬ್‌ಸೈಟ್‌ಗೆ ಬಂದು ಹೋಗುತ್ತಾರೆ.

'ಭಾರತದ ಬಗ್ಗೆ ನಿಜವಾದ ಶ್ರದ್ಧೆ, ಪ್ರೀತಿ, ಕಾಳಜಿ ಇಟ್ಟುಕೊಂಡು ಲಾಭಕೋರತನದಿಂದ ದೂರವುಳಿದು ಭಾರತದ ಅಭಿವೃದ್ಧಿಗಾಗಿಯೇ ದುಡಿಯುತ್ತಿರುವ ಸಾವಿರಾರು ಜನ ಹಾಗೂ ಪ್ರಾಮಾಣಿಕ ಸಂಸ್ಥೆಗಳನ್ನು' ಕಂಡಿದ್ದೇನೆ. ಅವರೊಂದಿಗೆ ಒಡನಾಡಿದ್ದೇನೆ. ಗುಡ್‌ನ್ಯೂಸ್ ಇಂಡಿಯಾ ವೆಬ್‌ಸೈಟಿನಲ್ಲಿ ಅಂತಹ ಮಹನೀಯರ ಕುರಿತು ಐನೂರಕ್ಕೂ ಹೆಚ್ಚು ಸುದ್ದಿಗಳನ್ನು ಪ್ರಕಟಿಸಿರುವುದು ನನಗೆ ತೃಪ್ತಿ ತಂದಿದೆ' ಎನ್ನುತ್ತಾರೆ ಶ್ರೀಧರನ್.

ವಿಶೇಷವೆಂದರೆ ಖ್ಯಾತ ಸುದ್ದಿ ಸಂಸ್ಥೆ ಬಿಬಿಸಿ ಕೂಡಾ ಗುಡ್‌ನ್ಯೂಸ್ ಇಂಡಿಯಾವನ್ನು ಶ್ಲಾಘಿಸಿದೆ. "ಜಗತ್ತಿನಾದ್ಯಂತ ನಕಾರಾತ್ಮಕ ಸುದ್ದಿಗಳೇ ತುಂಬಿರುವಾಗ ದೇಶವನ್ನು ಹೊಸ ದಿಕ್ಕಿನೆಡೆಗೆ ಕೊಂಡೊಯ್ಯಬಲ್ಲ ಪ್ರಯತ್ನವಿದು. ಇದು ನನ್ನ ಅತ್ಯುತ್ತಮ ವೆಬ್‌ಸೈಟ್‌ಗಳಲ್ಲೊಂದು" ಎಂದಿದ್ದಾರೆ ಬಿಬಿಸಿಯ ವರದಿಗಾರ್ತಿ ಕೇಟ್ ರಸೆಲ್.

ಶ್ರೀಧರನ್ ಅವರಿಗೀಗ 65 ವರ್ಷ. ಆದರೂ ಅವರ ಕ್ರಿಯಾಶೀಲತೆ ಕುಂದಿಲ್ಲ. ದೇಶ, ಸಮಾಜ, ಪರಿಸರದ ಕುರಿತ ಅವರ ಕಾಳಜಿ ಅನನ್ಯ. 'ಪಾಯಿಂಟ್ ರಿಟರ್ನ್' ಎಂಬ ಹೊಸ ಪರಿಸರದ ಕಾಳಜಿಯ ಪ್ರಾಜೆಕ್ಟ್‌ನಲ್ಲಿ ಅವರೀಗ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಪ್ರಾಜೆಕ್ಟ್‌ನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದರಿಂದ ಮತ್ತು ಕೆಲವು ವೈಯಕ್ತಿಕ ಕಾರಣಗಳಿಂದ ಗುಡ್‌ನ್ಯೂಸ್ ಇಂಡಿಯಾವನ್ನು ತಾತ್ಕಾಲಿಕವಾಗಿ ನಿಲ್ಲಿಸುತ್ತಿರುವುದಾಗಿ ಬರೆದಿದ್ದಾರೆ ಶ್ರೀಧರನ್. ತಮ್ಮ ಓದುಗರಿಗೆ ಸುಮಾರು 6 ಪುಟಗಳ ಪತ್ರ ಬರೆದಿರುವ ಅವರು ಅದಕ್ಕೆ ಕಾರಣಗಳನ್ನು ವಿವರಿಸಿದ್ದಾರೆ. 'ಪಾಯಿಂಟ್ ರಿಟರ್ನ್ ಪ್ರಾಜೆಕ್ಟ್'ನ ತಮ್ಮ ಕನಸುಗಳನ್ನು ಹಂಚಿಕೊಂಡಿದ್ದಾರೆ.

ದೇಶದ ಕುರಿತು ಗೌರವ ಹೆಚ್ಚಿಸುವ ಇಂತಹ ವಿಶಿಷ್ಟ ಪ್ರಯತ್ನ ಹುಟ್ಟು ಹಾಕಿದ ಶ್ರೀಧರನ್ ಎಂಬ ಕನಸುಗಾರನಿಗೆ ನಮಿಸೋಣ. 'ಗುಡ್‌ನ್ಯೂಸ್ ಇಂಡಿಯಾ ನಿಲ್ಲದಿರಲಿ' ಎಂದು ಹಾರೈಸೋಣ.

– ನಿಮ್ಮವನು **ರಾಚಂ**





# ಅಪ್ಪಿಕೋ ಚಳುವಳಿಗೆ ಬೆಳ್ಳಿಹಬ್ಬದ ಸಂಭ್ರಮ



*ಸರ್ಕಾರದ ಪರಿಸರ ವಿರೋಧಿ ಯೋಜನೆಯ ವಿರುದ್ಧ ಜನಸಾಮಾನ್ಯರೇ ಸಿಡಿದೆದ್ದು ಮರಗಳನ್ನು ತಬ್ಬಿ ಹಿಡಿದು ಕಾಡು ಉಳಿಸಿದ 'ಅಪ್ಪಿಕೋ ಚಳುವಳಿ' ಗೆ 25 ವರ್ಷ. ಈ ಹೋರಾಟದ ಕೇಂದ್ರಬಿಂದುವಾದ ಸಿರಸಿಯ ಸಾಲ್ಕಣಿ ಗ್ರಾಮದಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಅಪ್ಪಿಕೋ ಚಳುವಳಿಯ 25ನೇ ವರ್ಷಾಚರಣೆ ಸಂಭ್ರಮ. ಈ ವಿಶಿಷ್ಟ ಚಳುವಳಿಗೆ ಸ್ಫೂರ್ತಿಯಾದದ್ದು ಸುಂದರಲಾಲ್ ಬಹುಗುಣರ ಚಿಪ್ಕೋ ಆಂದೋಲನ. ಅಪ್ಪಿಕೋ ಚಳುವಳಿಯ 25ನೇ ವರ್ಷದ ನೆನಪಿನಲ್ಲಿ ಅದು ಸೃಷ್ಟಿಸಿದ ಸಂಚಲನ, ಅದರ ಮೂಲ ಸ್ಫೂರ್ತಿ ಚಿಪ್ಕೋ ಹಾಗೂ ಆಂದೋಲನದ ರುವಾರಿ ಬಹುಗುಣರ ಕುರಿತು ಬೆಳಕು ಚೆಲ್ಲಿದ್ದಾರೆ*

***ತೇಜಸ್ವಿನಿ ರಘುನಂದನ್.***

********

"ಮರ ಕಡಿಯುವ ಮುನ್ನ ನಮ್ಮನ್ನು ಕಡಿಯಿರಿ", "ಪ್ರಾಣ ಕೊಟ್ಟಾದರೂ ಕಾಡು ಉಳಿಸುವೆವು".

1983ರ ಸೆಪ್ಟೆಂಬರ್ 8ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಸಾಲ್ಕಣಿ, ಬಾಳೆಗದ್ದೆ ಗ್ರಾಮಗಳ ನೂರಾರು ಮಂದಿ ಕಳಾಸೆ ಅರಣ್ಯ ಪ್ರದೇಶದಲ್ಲಿ ಹೀಗೆ ಘೋಷಣೆ ಹಾಕುತ್ತಾ ಮರಗಳನ್ನು ತಬ್ಬಿ ಹಿಡಿದು ಸರ್ಕಾರದ ಉದ್ದೇಶಿತ ಅರಣ್ಯ ನಾಶದ ಯೋಜನೆಯ ವಿರುದ್ಧ ಪ್ರತಿಭಟನೆಗಿಳಿದಿದ್ದರು. ಇದು 'ಅಪ್ಪಿಕೋ ಚಳುವಳಿ' ಎಂಬ ಹೆಸರಿನಲ್ಲಿ ನಾಡಿನಾದ್ಯಂತ ಸಂಚಲನ ಸೃಷ್ಟಿಸಿತು. ಮರಗಳನ್ನು ತಬ್ಬಿ ಹಿಡಿದು ಕಾಡಿಗಾಗಿ ಪ್ರಾಣತ್ಯಾಗಕ್ಕೂ ಸಿದ್ಧರಾದ ಜನಸಮುದಾಯದ ಪ್ರತಿಭಟನೆಗೆ ಮಣಿದು ಸರ್ಕಾರ ತನ್ನ ಯೋಜನೆಯನ್ನು ಕೈ ಬಿಡಬೇಕಾದದ್ದು ಅಪ್ಪಿಕೋ ಚಳವಳಿಯ ಯಶಸ್ಸು. ಇದೇ ಸೆಪ್ಟೆಂಬರ್‌ನಲ್ಲಿ ಸಿರಸಿಯ ಸಾಲ್ಕಣಿ ಗ್ರಾಮದಲ್ಲಿ ಅಪ್ಪಿಕೋ ಚಳುವಳಿಯ 25ನೇ ವರ್ಷಾಚರಣೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಈ ಚಳುವಳಿಯ ಮೂಲ ಸ್ಫೂರ್ತಿಯಾದ ಚಿಪ್ಕೋ ಚಳುವಳಿಯ ರೂವಾರಿ ಶ್ರೀ ಸುಂದರಲಾಲ್ ಬಹುಗುಣರೇ ಪಾಲ್ಗೊಂಡದ್ದು ವಿಶೇಷ.

ಉತ್ತರ ಕನ್ನಡ ಜಿಲ್ಲೆ ಅಪಾರ ಜೀವವೈವಿಧ್ಯಗಳ ಬೀಡು. ಸದಾ ಫಲವತ್ತಾದ ನಿತ್ಯ ಹರಿದ್ವರ್ಣದ ಕಾಡುಗಳು, ತುಂಬಿ ಹರಿಯುವ ನದಿಗಳು, ಕಣ್ಮನ ಸೆಳೆಯುವ ಹತ್ತಾರು ಜಲಪಾತಗಳು, ಜಗತ್ತಿನಲ್ಲೇ ಅಪರೂಪದ ಜೀವ ಸಂಕುಲಗಳು, ಔಷಧೀಯ ಸಸ್ಯಗಳು, ಜಿಲ್ಲೆಯನ್ನು ಸಂಪದ್ಭರಿತವನ್ನಾಗಿ ಮಾಡಿವೆ. ಆದರೆ ಯಾವ ವೈಶಿಷ್ಟ್ಯತೆಗಳು ಅದರ ಹೆಮ್ಮೆಯಾಗಬೇಕಿತ್ತೋ ಅದೇ ಆ ಜೀವವೈವಿಧ್ಯಗಳ ತಾಣಕ್ಕೆ ಮುಳುವಾದದ್ದು ದುರಂತ. 'ಅಭಿವೃದ್ಧಿಯ ಯೋಜನೆಗಳಿಗೆ ಅನುಕೂಲಕರ' ಎಂಬ ಕಾರಣದಿಂದ ಅಭಿವೃದ್ಧಿಯ ಹೆಸರಿನಲ್ಲಿ ಒಂದೊಂದೇ ಯೋಜನೆಗಳು ಜಿಲ್ಲೆಗೆ ಧಾಂಗುಡಿಯಿಡತೊಡಗಿದವು. ಸೂಪಾ, ಬೇಡ್ತಿ, ಕೊಡಸಳ್ಳಿ ಡ್ಯಾಂ, ಕೈಗಾ ಅಣುವಿದ್ಯುತ್ ಸ್ಥಾವರ, ಸೀಬರ್ಡ್ ನೌಕಾನೆಲೆ, ಕಾಳಿನದಿ ಯೋಜನೆಯಿಂದ ಹಿಡಿದು ಇಂದಿನ ಉದ್ದೇಶಿತ

ತದಡಿ ವಿದ್ಯುತ್ ಸ್ಥಾವರದವರೆಗೆ ಪರಿಸರವನ್ನು, ಜನಸಾಮಾನ್ಯರ ನೆಮ್ಮದಿಯನ್ನು ನುಂಗಿ ನೀರು ಕುಡಿದ ಯೋಜನೆಗಳಿಗೆ ಲೆಕ್ಕವಿಲ್ಲ. ಲಕ್ಷಾಂತರ ಹೆಕ್ಟೇರು ಅರಣ್ಯ ಮುಳುಗಿಹೋಗಿವೆ. ಜೀವಸಂಕುಲಗಳು ನಾಶವಾಗಿವೆ. ಲಕ್ಷಾಂತರ ಮಂದಿ ಮನೆ-ಮಠ ಕಳೆದುಕೊಂಡು ಬೀದಿಗೆ ಬಂದಿದ್ದಾರೆ.

1983ರ ಸೆಪ್ಟೆಂಬರ್. 80 ಕ್ಕೂ ಹೆಚ್ಚು ಅಪರೂಪದ ಔಷಧೀಯ ಸಸ್ಯಗಳು, ಮನಮೋಹಕ ಹಸಿರು ವನರಾಶಿ, ಪ್ರಾಣಿ ಸಮೂಹ, ಬಾನೆತ್ತರದ ಮರಗಳನ್ನು ಹೊಂದಿದ್ದ ಜಿಲ್ಲೆಯ ಕಳಾಸೆ ಅರಣ್ಯ ಪ್ರದೇಶದಲ್ಲಿ ಈ ಎಲ್ಲವನ್ನೂ ನಾಶಗೊಳಿಸಿ ಏಕರೀತಿಯ ತೇಗ, ಅಕೇಶಿಯಾ ನೆಡುತೋಪುಗಳನ್ನು ಸೃಷ್ಟಿಸಲು ಸರ್ಕಾರ ಯೋಜನೆಯನ್ನು ರೂಪಿಸಿತು. ಪೇಪರ್ ಉತ್ಪಾದನೆಗೆ ಸಹಕಾರಿ ಎಂಬುದೊಂದು ನೆಪ. ಆದರೆ ಸರ್ಕಾರದ ಪರಿಸರ ವಿರೋಧಿ ಯೋಜನೆಗಳಿಂದ ರೋಸಿಹೋಗಿದ್ದ ಜನ ಸಾಮಾನ್ಯರು ಈ ಯೋಜನೆಯ ವಿರುದ್ಧ ಸಿಡಿದೆದ್ದರು. ಶಿರಸಿ ತಾಲ್ಲೂಕಿನ ಸಾಲ್ಕಣಿ ಗ್ರಾಮದ ಪುರುಷರು, ಮಹಿಳೆಯರು ಮಕ್ಕಳೆನ್ನದೆ ಗ್ರಾಮದ ನೂರಾರು ಮಂದಿ ಕಳಾಸೆ ಅರಣ್ಯ ಪ್ರದೇಶದ ಮರಗಳನ್ನು ತಬ್ಬಿ ಹಿಡಿದು ಚಳುವಳಿ ಆರಂಭಿಸಿ ದರು. ಈ ಚಳುವಳಿ ನಾಡಿನಾದ್ಯಂತ ಸಂಚಲನ ಸೃಷ್ಟಿಸಿತು. ಸಾಲ್ಕಣಿ, ಮತ್ತಿಘಟ್ಟ, ಬಾಳೆಗದ್ದೆ, ಜಡ್ಡಿಗದ್ದೆ, ಕೆಳಗಿನ ಜಡ್ಡಿ, ವಾನಳ್ಳಿ ಮುಂತಾದ ಸುತ್ತಮುತ್ತಲ ಗ್ರಾಮಗಳ ಸಾವಿರಾರು ಮಂದಿ ಸ್ವಯಂ ಪ್ರೇರಿತರಾಗಿ ಆಂದೋಲನದಲ್ಲಿ ಪಾಲ್ಗೊಂಡರು. ಅರಣ್ಯದೊಳಗಿನ ಈ ಪ್ರತಿಭಟನೆ ಸತತ 38 ದಿನಗಳವರೆಗೆ ಮುಂದುವರಿ ಯಿತು. ನೆರೆಯ ಶಿವಮೊಗ್ಗ, ಸಾಗರ, ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿಯಿಂದ, ಕೇರಳದವರೆಗೆ ಹಬ್ಬಿದ ಈ ಆಂದೋಲನ ದೇಶದಾದ್ಯಂತ ಸಂಚಲನೆಗೆ ಕಾರಣವಾಯಿತು. ಕೊನೆಗೂ ಜನಸಮುದಾಯದ ಪ್ರತಿಭಟನೆಗೆ ಮಣಿದ ಸರ್ಕಾರ ಉದ್ದೇಶಿತ ಯೋಜನೆಯನ್ನು ಕೈ ಬಿಡಬೇಕಾಯಿತು. ಅಪ್ಪಿಕೋ ಚಳುವಳಿ ನಾಡಿನಾದ್ಯಂತ ವಿವಿಧ ಜನಸಮುದಾಯದ ಹೋರಾಟಕ್ಕೆ ಹೊಸ ಶಕ್ತಿಯನ್ನು ತುಂಬಿತು. ಇಂದಿಗೂ ಆ ಪ್ರದೇಶದ ಯುವಜನತೆಯಲ್ಲಿ ಈ ಚಳುವಳಿ ಹೊಸ ಸ್ಫೂರ್ತಿಯನ್ನು ತುಂಬುತ್ತಿದೆ. ಅಭಿವೃದ್ಧಿ ಯೋಜನೆಗಳ ಬಲಿಪಶು ಆಗಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತೊಂದು ಇಂತಹುದೇ ಜನಸಮುದಾಯದ ಚಳುವಳಿ ಹುಟ್ಟುತ್ತದೆಯೇನೋ ಎಂದು ಇಡೀ ನಾಡು ಕಾತರದಿಂದ ಕಾಯುತ್ತಿದೆ.

**'ಚಿಪ್ಕೋ ಆಂದೋಲನ'** :

"ತಬ್ಬಿರಿ ಮರಗಳನ್ನು, ನೆಲಕ್ಕುರುಳದಂತೆ ಕಾಪಾಡಿ ಅವುಗಳನ್ನು. ನಮ್ಮ ಕಾಡು, ನಮ್ಮ ಹಕ್ಕು.. ಬೇರೆಯವರು ಅದನ್ನು ದೋಚದಂತೆ ತಡೆಯಿರಿ."



'ಚಿಪ್ಕೋ' ಆಂದೋಲನ ಎಂದಾಕ್ಷಣ ನೆನಪಿಗೆ ಬರುವುದು 1970ರ ದಶಕದಲ್ಲಿ ಕಾಡು ಕಡಿತವನ್ನು ತಡೆಗಟ್ಟಬೇಕೆಂದು ಉತ್ತರ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಆರಂಭವಾದ ಆಂದೋಲನ. ಆದರೆ....

ನಿಜವಾದ ಚಿಪ್ಕೋ ಆಂದೋಲನ ಸುಮಾರು 260 ವರ್ಷಗಳ ಹಿಂದೆಯೇ ಅಂದರೆ 18ನೇ ಶತಮಾನದ ಆರಂಭಿಕ ದಿನಗಳಲ್ಲಿಯೇ ರಾಜಾಸ್ಥಾನದ ಹಳ್ಳಿಗರಿಂದ ಪ್ರಾರಂಭವಾಗಿತ್ತು. ಜೋಧ್‌ಪುರದ ಮಹಾರಾಜ ಹೊರಡಿಸಿದ್ದ ಆದೇಶದ ಪ್ರಕಾರ ಅಲ್ಲಿನ ಮರಗಳನ್ನು ಕಡಿಯುವ ಕೆಲಸ ಪ್ರಾರಂಭವಾಗಿತ್ತು. ಸುಮಾರು 84 ಜನರಿದ್ದ ಒಂದು ಗುಂಪು ಅಮೃತಾದೇವಿ ಎಂಬ ದಿಟ್ಟ ಮಹಿಳೆಯ ನಾಯಕತ್ವದಲ್ಲಿ ಮರಗಳನ್ನು ತಬ್ಬಿ ನಿಂತು ಪ್ರತಿಭಟನೆ ನಡೆಸಿದರು.

ಸರಿ ಸುಮಾರು 19ನೇ ಶತಮಾನದ ಮಧ್ಯ ಭಾಗದಲ್ಲಿ ಭಾರತದ ಉತ್ತರಭಾಗದ ಎಲ್ಲ ಪರ್ವತ ಪ್ರದೇಶಗಳಲ್ಲಿ ಕಾಡುಗಳನ್ನು ಕಡಿಯುವ ಬಹು ದೊಡ್ಡ ಸಮಸ್ಯೆ ಆರಂಭವಾಗಿತ್ತು. ಉತ್ತರಾಖಂಡದ





ಜನ ಇದನ್ನು ನಿಲ್ಲಿಸಲೇಬೇಕೆಂದು ಪಣ ತೊಟ್ಟು 'ಚಿಪ್ಕೋ' ಆಂದೋಲನವನ್ನು ಆರಂಭಿಸಿದರು. 1973ರ ಏಪ್ರಿಲ್‌ನಲ್ಲಿ ಉತ್ತರ ಅಲಕಾನಂದದ ಪರ್ವತ ಪ್ರದೇಶಗಳಲ್ಲಿ ಆರಂಭವಾದ ಇದರ ಬಿಸಿ ಐದು ವರ್ಷಗಳಲ್ಲಿ ಸುತ್ತಮುತ್ತಲಿನ ಎಲ್ಲಾ ಜಿಲ್ಲೆಗಳಿಗೂ ವ್ಯಾಪಿಸಿತು. ಅಂದಿನ ಸರ್ಕಾರ ಕಾಡಿನ ಕೆಲಭಾಗವನ್ನು 'ಸ್ಪೋರ್ಟ್ ಗೂಡ್ಸ್ ಕಂಪೆನಿ' ಕೊಟ್ಟ ಪರಿಣಾಮದಿಂದ ರೊಚ್ಚಿಗೆದ್ದ ಅಲ್ಲಿನ ಜನರು ತಮ್ಮ ಜೀವನಕ್ಕೆ ಬೇಕಾದ ಉರುವಲುಗಳಿಗೆ, ಮನೆ ಕಟ್ಟೋದಕ್ಕೆ ಹಾಗೆಯೇ ತಮ್ಮ ವ್ಯವಸಾಯಕ್ಕೆ ಬೇಕಾಗುವ ಸಾಮಾನು ಸರಂಜಾಮುಗಳನ್ನು ರೂಪಿಸಿಕೊಳ್ಳಲು ಬೇಕಾಗಿದ್ದ ಕಾಡನ್ನು ಕಡಿಯುವ ಸುದ್ದಿ ಕೇಳಿ ಕೆರಳಿದರು.

'ಚಿಪ್ಕೋ' ಆಂದೋಲನದಿಂದ ಸಾವಿರಾರು ದೈತ್ಯ ಗಾತ್ರದ ಪುರಾತನ ಮರಗಳು ಉಳಿದವು. ಮುಖ್ಯವಾಗಿ ಇದಕ್ಕೆ ಸಿಕ್ಕ ಜಯ ಅಂದರೆ - 15 ವರ್ಷಗಳ ಕಾಲ ಯಾವುದೇ ಮರವನ್ನು ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಕಡಿಯಬಾರದೆಂಬ ಆದೇಶ ಹೊರಬಿತ್ತು. ಉತ್ತರ ಪ್ರದೇಶದಲ್ಲಿ ಆರಂಭವಾದ ಈ ಆಂದೋಲನ ಮುಂದೆ ದೇಶದ ಹಲವಾರು ರಾಜ್ಯಗಳಲ್ಲಿ ಪಸರಿಸಿ ಕಾಡನ್ನು ಉಳಿಸುವಲ್ಲಿ ಸಹಕಾರಿಯಾಯಿತು. ಇದರಿಂದ ಪಶ್ಚಿಮ ಘಟ್ಟಗಳು ಹಾಗೂ ವಿಂಧ್ಯಗಿರಿಯ ಕಾಡನ್ನು ನಾಶ ಮಾಡಬಾರದೆಂಬ ಆದೇಶವೂ ಜಾರಿಯಾಯಿತು.

'ಚಿಪ್ಕೋ' ಅಂದರೆ ಹಿಂದಿಯಲ್ಲಿ ಅಪ್ಪಿಕೊಳ್ಳುವುದು ಎಂದರ್ಥ. ಈ ಆಂದೋಲನದಲ್ಲಿ ಮುಖ್ಯವಾಗಿ ಮಹಿಳೆಯರು ಮತ್ತು ಮಕ್ಕಳೇ ಪ್ರಮುಖ ಪಾತ್ರ ವಹಿಸಿದ್ದರು. ಎಲ್ಲರೂ ಒಗ್ಗಟ್ಟಿನಿಂದ ಒಟ್ಟಾಗಿ ನಿಂತು ಮರಗಳನ್ನು ತಬ್ಬಿ ನಿಂತು ಮರ ಕಡಿಯುವವರ ವಿರುದ್ಧ ಮೂಕ ಹೋರಾಟ ನಡೆಸಿದರು. ಗಾಂಧೀವಾದಿ, ತತ್ವಜ್ಞಾನಿ ಸುಂದರ್‌ಲಾಲ್ ಬಹುಗುಣ ಈ ಆಂದೋಲನದ ಪ್ರಮುಖ ವ್ಯಕ್ತಿ. ಅವರ ನೇತೃತ್ವದಲ್ಲಿ ಈ ಹೋರಾಟ ಇನ್ನೂ ಮುಂದುವರೆದು ತೆಹ್ರಿ ಅಣೆಕಟ್ಟು ಕಟ್ಟದಂತೆ ತಡೆ ಹಾಕಿತು. ಚಂಡಿಪ್ರಸಾದ್ ಭಟ್ ಕೂಡ 'ಚಿಪ್ಕೋ' ಆಂದೋಲನದ ಮುಖ್ಯ ರೂವಾರಿಗಳಲ್ಲಿ ಒಬ್ಬರು. ಇವರು ಸ್ಥಳೀಯರು ಹೇಗೆ ಕಾಡನ್ನು ನಾಶಪಡಿಸದೇ ಅವುಗಳ ಉತ್ಪನ್ನದಿಂದ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಬಹುದೆಂದು ತೋರಿಸಿ ಕೊಟ್ಟು ಹಳ್ಳಿಗರಿಗೆ ಉದ್ಯೋಗ ಕಲ್ಪಿಸಿದರು.

**ಸುಂದರ್‌ಲಾಲ್ ಬಹುಗುಣ :**



"ಮನೆಯೇ ಮೊದಲ ಪಾಠಶಾಲೆ" ಎಂಬಂತೆ ಸುಂದರ್ ಲಾಲ್ ಬಹುಗುಣ ಅವರಿಗೆ ಅವರ ತಂದೆ ಅಂಬುದತ್ತರು "ಅಹಿಂಸೆ ಮತ್ತು ಸೇವಾ ಮನೋಭಾವ"ಗಳ ಬೀಜವನ್ನು, ಅವರು 3 ವರ್ಷದವರಿದ್ದಾಗಲೇ ಬಿತ್ತಿದರು. ಪುಟ್ಟ ಸುಂದರ್‌ಲಾಲ್, ತನ್ನ ಖರ್ಚಿಗೆಂದು ಕೊಟ್ಟ ಹಣದಲ್ಲಿ "ಸ್ವರಾಜ್ಯ ಕೈಸೆ ಆಯೇ?", 'ಎ ವರ್ಡ್ ಟು ಯಂಗ್ ಮೆನ್' ಮತ್ತು 'ವಂದೇಮಾತರಂ' ಪುಸ್ತಕಗಳನ್ನು ಕೊಂಡು ತಂದು ಓದಿದರೆಂದರೆ "ಬೆಳವ ಸಿರಿ ಮೊಳಕೆಯಲ್ಲೇ" ಎಂಬ ಮಾತು ಸತ್ಯವೆನಿಸುತ್ತದೆಯಲ್ಲವೇ? ಆ 3 ಪುಸ್ತಕಗಳು ಅವರ ಮೇಲೆ ಅಗಾಧ ಪರಿಣಾಮವನ್ನು ಬೀರಿದವು. ಮುಂದೆ, ಸ್ವತಂತ್ರ ಹೋರಾಟದ ಬಗ್ಗೆ ವರದಿಗಳನ್ನು ತಯಾರು ಮಾಡಿ ಪತ್ರಿಕೆಗಳಿಗೆ ಕೊಡುವುದಕ್ಕೆ ಆರಂಭಿಸಿದರು. ತತ್ಪರಿಣಾಮವಾಗಿ ಸೆರೆಮನೆ ವಾಸ ಅನುಭವಿಸಬೇಕಾಯಿತು. 1944 ರ ಜುಲೈನಲ್ಲಿ ತಮ್ಮ ಇಂಟರ್‌ಮೀಡಿಯೇಟ್ ಪರೀಕ್ಷೆಯನ್ನು ಬಂಧೀಖಾನೆಯಲ್ಲೇ ಕುಳಿತು ಬರೆದು ಪಾಸಾದರು. ಈತ ಅಪ್ಪಟ ಗಾಂಧೀವಾದಿ, ಗಾಂಧೀಜಿಯಂತೆ ಸರಳ ಜೀವಿ ಕೂಡ.

ಪ್ರಪಂಚದಾದ್ಯಂತ ಎದುರಿಸುತ್ತಿರುವ "ಹಸಿರು ಮನೆ ಪರಿಣಾಮ", ಭೂ ಬಿಸಿ ಮುಂತಾದ ಅಪಾಯಕಾರೀ ಬಗೆಹರಿಯದ ಕಾರ್ಯಗಳಿಗೆ ಹಸಿರು ಸಿರಿಯ ಮಹತ್ವವನ್ನು ತೋರಿಸಿ ಕೊಟ್ಟರು.

ಬಹುಗುಣ ಅವರ ನೇತೃತ್ವದಲ್ಲಿ "ಚಿಪ್ಕೋ" ಆಂದೋಲನ ಆರಂಭವಾಯಿತು. ಜನರು ಜಾಗೃತರಾದರು. ಮರಗಳನ್ನು ಕಡಿಯಲು ಬಂದವರಿಗೆ ಆಶ್ಚರ್ಯ ಕಾದಿತ್ತು. "ಮೊದಲು ನಮ್ಮನ್ನು ಕಡಿದು ನಂತರ ಮರಗಳನ್ನು ಕಡಿಯಿರಿ" ಎಂದು ಜನರು ಮರಗಳನ್ನು ಅಪ್ಪಿ ಹಿಡಿದಿದ್ದರು. ಸರ್ಕಾರ ಮಣಿಯಲೇ ಬೇಕಾಯಿತು.

ಸಮುದ್ರ ಮಟ್ಟಕ್ಕಿಂತ 1,000 ಅಡಿ ಎತ್ತರದ ಪ್ರದೇಶಗಳಲ್ಲಿ ವಾಣಿಜ್ಯ ವ್ಯಾಪಾರಕ್ಕಾಗಿ ಮರ ಕಡಿಯುವುದನ್ನು ಸರ್ಕಾರ ನಿಷೇಧಿಸಿತು.

1981 ರಲ್ಲಿ ಕಾಶ್ಮೀರ್-ಕೋಹಿಮ ಯಾತ್ರೆಯಲ್ಲಿ ಪಾಲ್ಗೊಂಡು ಸುಮಾರು 4800 ಕಿ.ಮೀ ದೂರವನ್ನು 300 ದಿನಗಳಲ್ಲಿ ಕ್ರಮಿಸಿದರು. ಈ ಯಾತ್ರೆಯನ್ನವರು ಆಗ ನಡೆಯುತ್ತಿದ್ದ ಇಂಡೋ ಚೈನಾ ಯುದ್ಧದ ಶಾಂತಿಗಾಗಿ ನಡೆಸಿದ್ದನ್ನು ನಾವು ಎಂದೆಂದಿಗೂ ಸ್ಮರಿಸಬೇಕು.

ಬಹುಗುಣ ಅವರು ಎಷ್ಟೋ ಕೈಗಾರೀಕರಣವನ್ನು ತೀವ್ರವಾಗಿ ವಿರೋಧಿಸುತ್ತಾರೆ. ಇವುಗಳಿಂದ ಕಾಡುಗಳ ನಾಶವಲ್ಲದೆ ಜೀವ ಸಂಕುಲಗಳ ವಿನಾಶಕ್ಕೂ ಇದೇ ನಾಂದಿ ಎಂದವರು ಅಭಿಪ್ರಾಯ ಪಡುತ್ತಾರೆ. ಮನುಷ್ಯ ಹೆಚ್ಚಾಗಿ ಪ್ರಕೃತಿಯನ್ನವಲಂಬಿಸಿ ಜೀವಿಸಬೇಕೇ ಹೊರತು ತಾನೇ ತಯಾರಿಸಿಕೊಂಡ ಕೃತಕ ವಸ್ತುಗಳಿಂದಲ್ಲ ಎನ್ನುತ್ತಾರೆ ಅವರು.

1995 ರಲ್ಲಿ ಸರ್ಕಾರ ತೆಹ್ರಿ ಅಣೆಕಟ್ಟು ಯೋಜನೆಗೆ ಅನುಮತಿ ನೀಡಿದ್ದಕ್ಕಾಗಿ 4-5 ದಿನಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಿ ಹೆಚ್ಚು ಅಪಾಯವಿಲ್ಲದ ಸ್ಥಳದಲ್ಲಿ ಅಣೆಕಟ್ಟನ್ನು ನಿರ್ಮಿಸಬೇಕೆಂದು ಮನವಿ ಮಾಡಿದರು.

ಸುಂದರ್ ಲಾಲ್ ಬಹುಗುಣ ಅವರದು ಬಹುಮುಖ ಪ್ರತಿಭೆ. ಈ ಇಳಿವಯಸ್ಸಿನಲ್ಲೂ ಪುಟಿಯುವ ಅವರ ಚೈತನ್ಯ, ಅಮೋಘವಾದುದು. ನಮ್ಮ ಈ ಇಂದಿನ ಯುವ ಜನಾಂಗ ಇಂಥಹವರಿಂದ ಕಲಿಯುವುದು ಬಹಳಷ್ಟಿದೆ.

– ತೇಜಸ್ವಿನಿ ರಘುನಂದನ್

## ಡೊಂಕೋಕ್ತಿ

- ದಿನಕ್ಕೊಂದು ಸೇಬು ತಿಂದರೆ ಡಾಕ್ಟರನ್ನು ದೂರವಿಡಬಹುದು. ಈರುಳ್ಳಿ ತಿಂದರೆ ಎಲ್ಲರನ್ನೂ...
- ಕಾರ್ಯದ ಜೊತೆಯಲ್ಲೇ ವಿಶ್ರಾಂತಿಯನ್ನೂ ಏಕಕಾಲಕ್ಕೆ ಅನುಭವಿಸುವ ಜೀವಿ ಹಾವು ಮಾತ್ರ.
- ಒಂದು ಯಶಸ್ವೀ ಹೆಣ್ಣಿನ ಬೆನ್ನ ಹಿಂದೆ ಹಲವಾರು ಗಂಡಸರು ಇರುತ್ತಾರೆ.

– ವಿ.ಸುಂಕಸಾಳ, 9844673588

ವಿಷಯ ವಿಭಿನ್ನ

## ರೊಬಾಟ್ ಬಳಸಿ ಮೂತ್ರಕೋಶ ಶಸ್ತ್ರಚಿಕಿತ್ಸೆ: ವಿಶ್ವದಲ್ಲೇ ಭಾರತ ಮೊದಲು

ದೆಹಲಿಯ ಅಖಿಲ ಭಾರತ ವೈದ್ಯ ಮಹಾವಿದ್ಯಾಲಯ (ಏಮ್ಸ್) ರೋಬಾಟ್ ಸಹಾಯದಿಂದ ಮೂತ್ರಕೋಶದ ಗಡ್ಡೆ ಹೊರತೆಗೆಯುವ ಶಸ್ತ್ರ ಚಿಕಿತ್ಸೆ ನಡೆಸುವ ಮೂಲಕ ವಿಶ್ವದಲ್ಲೇ ಮೊದಲ ಬಾರಿ ರೊಬಾಟ್ ಬಳಸಿ ಮೂತ್ರಕೋಶ ಶಸ್ತ್ರಚಿಕಿತ್ಸೆ ಮಾಡಿದ ಸಾಧನೆ ಮೆರೆದಿದೆ. 3 ತಾಸು ಅವಧಿ ತೆಗೆದುಕೊಂಡ ಈ ಯಶಸ್ವಿ ಶಸ್ತ್ರಚಿಕಿತ್ಸೆಯ ನಂತರ 53 ವರ್ಷದ ಆ ರೋಗಿ ಗುಣಮುಖರಾಗುತ್ತಿದ್ದಾರೆ. ಹಲವು ರಾಜಕೀಯ ಕಾರಣಗಳಿಗೆ ಸುದ್ದಿಯಾಗುತ್ತಿದ್ದ ಏಮ್ಸ್ ಈ ಬಾರಿ ಈ ಸಾಧನೆಗಾಗಿ ಸುದ್ದಿಯಲ್ಲಿದೆ.





# ಕಥಾರಶ್ಮಿ



– ಮಹಮ್ಮದ್ ರಫೀಕ್, ಇಳಕಲ್

## ದೇವರು

ಜನವರಿ ತಿಂಗಳಿರಬಹುದು ಅದು. ಚಳಿಯಲ್ಲಿ ಧರ್ಮಶಾಲಾ ಎಂಬ ಊರಿನಲ್ಲಿ ರಾತ್ರಿ ವೇಳೆ ಪ್ರಯಾಣಿಕರು ತಂಗುವುದಕ್ಕೆ ಕೆಲವು ಉಚಿತ ಛತ್ರಗಳಿದ್ದವು. ಅಂತಹುದೇ ಒಂದು ಛತ್ರದಲ್ಲಿ ಛಳಿಯಲ್ಲಿ ನಡುಗುತ್ತ ನಾಲ್ಕಾರು ಪ್ರಯಾಣಿಕರು ಬೆಂಕಿ ಕಾಯಿಸುತ್ತ ಕುಳಿತಾಗ ಧನಿಕನಂತೆ ಕಾಣುವ ವ್ಯಕ್ತಿಯೊಬ್ಬ ಬಂದು ಸೇರಿದ. ಗಾಂಜಾ ಚಿಲುಮೆಯನ್ನು ಸೇದುತ್ತ ಕುಳಿತಿದ್ದ ವ್ಯಕ್ತಿ ಆ ಧನಿಕನ ಕಡೆಗೊಮ್ಮೆ ನೋಡಿ ಜೋರಾಗಿ ಕಶ್ ಎಳೆದು ಕಣ್ಣು ಮುಚ್ಚಿ ಆಗಸಕ್ಕೆ ಮುಖ ಮಾಡಿ ಹೊಗೆ ಬಿಡುತ್ತಿದ್ದ. ತಮ್ಮಷ್ಟಕ್ಕೆ ತಾವೇ ಮಾತಿನಲ್ಲಿ ನಿರತರಾದ ಗುಂಪಲ್ಲಿ ಒಬ್ಬ, ಆ ಗಾಂಜಾ ಸೇದುತ್ತಿದ್ದ ವ್ಯಕ್ತಿಯೆಡೆಗೆ ಕಣ್ಣಂಚಿನಲ್ಲಿ ಬೊಟ್ಟು ಮಾಡಿ 'ಸ್ವರ್ಗವೆಂದರೆ ಅಲ್ಲಿದೇ ನೋಡು ಮಿತ್ರ. ಅವನು ಈ ಮೈ ಹೆಪ್ಪುಗಟ್ಟುವ ಚಳಿಯಲ್ಲಿ ಬಿಸಿ ಗಾಂಜಾ ಹೊಗೆ ಸೇದಿ ಹಗುರಾಗಿ ತೇಲುತ್ತಿದ್ದಾನಲ್ಲ ಅಲ್ಲಿ' ಎಂದ.

ಹೀಗೇ ಸ್ವರ್ಗದಿಂದ ಹೊರಟ ಮಾತು ಅದರಲ್ಲಿನ ಸುಖಗಳು, ಸುಖವನ್ನು ಪಡೆಯುವ ಸಲುವಾಗಿ ಜೀವನದಲ್ಲಿ ಪಡುವ ಕಷ್ಟಗಳ ಬಗ್ಗೆ ಮಾತು ಹೊರಳುತ್ತಿರುವಾಗ ಒಬ್ಬ 'ಇದೆಲ್ಲ ತಾತ್ಕಾಲಿಕ. ಮರಣೋತ್ತರ ಅಮರರಾಗಿ ಸ್ವರ್ಗದಲ್ಲೇ ಬಾಳಬಹುದು ಸ್ವರ್ಗದಲ್ಲಿ. ಈ ಪ್ರಪಂಚ ಕೊನೆಯಾದ ನಂತರವೂ..ಅದಕ್ಕೆ ಭಕ್ತಿಮಾರ್ಗ ಅನುಕರಿಸಬೇಕು'. ಭಕ್ತಿಮಾರ್ಗ ಎನ್ನುತ್ತಲೂ ಅಲ್ಲಿ ಕುಳಿತವರೆಲ್ಲರೂ ತಮ್ಮ ತಮ್ಮ ನಂಬುಗೆಯ ದೇವರುಗಳ ಒಲಿಸಲು ಅನುಕರಿಸಬೇಕಾದ ಭಕ್ತಿ ಮಾರ್ಗದ ಬಗ್ಗೆ ಹೇಳತೊಡಗಿದರು.

ಧನಿಕನು ಮೊದಲು ಮಾಡಿದ. "ಕಾಯಕವೇ ಕೈಲಾಸ ಎಂದು ಅಣ್ಣ ಬಸವಣ್ಣನವರು ಹೇಳಿದ್ದಾರೆ. ದೇವರನ್ನು ಒಲಿಸಿ ಸ್ವರ್ಗ ಪಡೆಯಲು ಇರುವುದೊಂದೇ ಮಾರ್ಗ. ಯಾವುದೇ ಕೆಲಸಗಳನ್ನು ಮೇಲು ಕೀಳೆನ್ನದೇ ಶ್ರದ್ಧೆಯಿಂದ ಮಾಡುವುದು. ಕಾಯಕದಲ್ಲಿ ನಿರಂತರವಾಗಿರುವುದು. ಅದು ಕೊಡುವ ಸಂಪತ್ತನ್ನು ಈ ಲೋಕದಲ್ಲಿಯೂ ಅನುಭವಿಸಬಹುದು. ಅಷ್ಟೈಶ್ವರ್ಯ ಸಂಪತ್ತನ್ನು ಗಳಿಸದಿದ್ದರೂ ಕೆಲಸದಲ್ಲಿ ಮುಳುಗಿದಾಗ ಸಿಗುವ ಸಂತೃಪ್ತಿಯೇನು ಕಡಿಮೇಯೇನಲ್ಲ" ಎಂದು ಹೇಳಿದ. ಸ್ವರ್ಗಕ್ಕೆ ಇದೊಂದೆ ದಾರಿ ಎಂದೂ ಸಾರಿದ.

"ಇರಬಹುದೇನೋ... ಆದರೆ ನಾನು ಅದನ್ನು ನಂಬಲಾರೆ" ಎಂದೆನ್ನುತ್ತ ವ್ಯಕ್ತಿಯೊಬ್ಬ ಮಾತು ಸೇರಿಸಿದ "ಈ ಜಗತ್ತನ್ನು ಸೃಷ್ಟಿಸಿದವನು ಬ್ರಹ್ಮ. ಅವನೇ ನಿಜವಾದ ದೇವರು. ಬ್ರಾಹ್ಮಣರಾದ ನಾವು ಅವನನ್ನು ಪೂಜಿಸುತ್ತೇವೆ. ಸಾವಿರಾರು ವರುಷಗಳುರುಳಿದವು, ಯುಗಗಳು ಕಳೆದವು. ಆದರೂ ಬ್ರಹ್ಮ ಎಂದಿನಿಂದಲೂ ಪೂಜಿಸಲ್ಪಡುತ್ತಾನೆ. ಅವನೇ ನಮ್ಮನ್ನು ರಕ್ಷಿಸಿದಾನೆ ಕೂಡ. ಬ್ರಹ್ಮನ ಅವತಾರಗಳೆ ಉಳಿದ ದೇವರುಗಳು. ಇವರೆಲ್ಲರ ಮೂಲ 'ಬ್ರಹ್ಮ'ನೇ. ಹೀಗಾಗಿ ನಮ್ಮ ಧರ್ಮವೇ ಹಳೆಯದು. ಆದಿಕಾಲದಿಂದಲೂ ಈ ಧರ್ಮವೂ ಉತ್ತುಂಗದಲ್ಲಿತ್ತು, ಇದೆ. ಈ ಧರ್ಮವನ್ನು ಪಾಲಿಸಿದರೆ ಮಾತ್ರ ಸ್ವರ್ಗ" ಎಂದು ಆವೇಶದಿಂದ ಹೇಳುತ್ತಲಿದ್ದ.

ಅಷ್ಟರಲ್ಲಿಯೇ ಅವನ ಎದುರು ಕುಳಿತಿದ್ದ ವ್ಯಕ್ತಿಯು "ನಾನಿದನ್ನು ಖಂಡಿತವಾಗಿಯೂ ಒಪ್ಪಲಾರೆ. ದೇವರೆಂದರೆ ಕರುಣಾಮಯಿ. ಅವನು ನೀವು ರಚಿಸಿರುವಂತಹ ಈ ಸಾವಿರಾರು ಶಿಲ್ಪಗಳಲ್ಲಿರುವುದಿಲ್ಲ, ಮನುಷ್ಯರ ಹೃದಯದಲ್ಲಿರುತ್ತಾನೆ. ಅವನು ಪವಿತ್ರ ಮೇರಿಯ ಮಗನು. ತನ್ನನ್ನೇ ಗಲ್ಲಿಗೇರಿಸುತ್ತಿದ್ದರೂ 'ಅವರನ್ನು ಕ್ಷಮಿಸು ತಂದೆ, ಅವರಿಗೆ ತಿಳಿಯದು ತಾವೇನು ಮಾಡುತ್ತಿರುವವರೆಂದು' ಪ್ರಾರ್ಥಿಸಿದವನು. ಜಗಕೆಲ್ಲ ಶಾಂತಿಯ ಸಂದೇಶ ನೀಡಿದವನು. ಅವನೇ ಯೇಸು. ಯೇಸುವೇ ನಮ್ಮೆಲ್ಲರ ದೇವರು. ಅವನೇ ಮೋಕ್ಷಕ್ಕೆ ದಾರಿ" ಎಂದು ಗರ್ವದಿಂದ ಹೇಳಿ ಇತರರೆಡೆಗೆ ನೋಡಿದನು.

"ದೇವರಿಗೂ ಗಲ್ಲಿಗೇರಿಸಬಹುದೇ?" ಎಂದೊಬ್ಬ ಪ್ರಶ್ನೆಯಿತ್ತ. "ಇವರನ್ನು ಕ್ಷಮಿಸು ತಂದೆ ಎಂದು ಪ್ರಾರ್ಥಿಸಿದವನು ದೇವರು ಹೇಗಾಗಬಲ್ಲ?. ನಿಮಗೆಲ್ಲರಿಗೂ ಗೊತ್ತು ಇಸ್ಲಾಂ ಎನ್ನುವುದು ಈ ಎಲ್ಲ ಧರ್ಮಗಳಿಗಿಂತಲೂ ಅಭಿವೃದ್ಧಿಯಲ್ಲಿರುವ ಧರ್ಮ. ಕ್ರಿಶ್ಚಿಯಾನಿಟಿಯಲ್ಲಿನ ತಪ್ಪುಗಳನ್ನು ತೋರಿಸಿ ಅದು

**ಕಿಟಕಿಯಾಚೆಗೆ ಇರುವುದು ಒಂದೇ ಆಗಿದ್ದರೂ ಎಲ್ಲರೂ ಬೇರೆ ಬೇರೆ ನಂಬಿಕೆಯೆಂಬ ಕಣ್ಣುಗಳ ರಂಧ್ರದಿಂದ ತಮಗೆ ಕಂಡದ್ದಷ್ಟನ್ನೇ ನೋಡಿ, ತಮಗೆ ಕಂಡದ್ದಕ್ಕೆ ಪೂರಕವಾಗಿ ಅಲ್ಲಿಗೇ ತಲುಪಲು ಬೇಕಾಗುವ ಮಾರ್ಗವೇ 'ನೈಜ' ಮಾರ್ಗ, ಉಳಿದೆಲ್ಲ ಸುಳ್ಳು ಎಂದು ಸಾಧಿಸುತ್ತಾರೆ.**

ಪರಿಪೂರ್ಣ ಧರ್ಮವಲ್ಲವೆಂದು ಸಾಬೀತು ಪಡಿಸಿದೆ. ನಮಗೆ ಇತರೆ ಧರ್ಮದವರಿರುವ ಹಾಗೆ ನಿಶ್ಚಿತ ದೇವರ ರೂಪವಿಲ್ಲ. ಯಾಕೆಂದರೆ ಅವನು ಸರ್ವಾಂತರಯಾಮಿ. ಪ್ರವಾದಿ ಮುಹಮ್ಮದರು ಹೇಳಿದ ಪಥದಲ್ಲಿ ನಡೆದರೆ ಮಾತ್ರ ಮೋಕ್ಷ. ನಿರ್ಣಾಯಕ ದಿನದಂದು ಮಹಮ್ಮದನ ಅನುಯಾಯಿಗಳನ್ನು ಬಿಟ್ಟು ಉಳಿದವರಾರೂ ಉಳಿಯಲಾರರು" ಎಂದು ತಾನು ಹೇಳಿದ್ದು ಇತರರಿಗೆ ಸರಿಯಾಗಿ ಕೇಳಿಸಿತೋ ಇಲ್ಲವೋ ಎನ್ನುವಂತೆ ಎಲ್ಲರೆಡೆಗೂ ಒಂದು ದೃಷ್ಟಿ ಬೀರಿದ.

ಹೀಗೇ ಒಂದೊಂದು ಪ್ರಶ್ನೆಗೆ ಪ್ರತಿಯೊಬ್ಬರೂ ಒಂದೊಂದು ಸಮರ್ಥನೆ ನೀಡುತ್ತ ತಮ್ಮ ಧರ್ಮವೇ ಶ್ರೇಷ್ಠ ಮತ್ತು ತಾವು ಅನುಸರಿಸುತ್ತಿರುವ ಧರ್ಮ 'ಮಾತ್ರ' ಸತ್ಯವಾದುದೂ ಎಂದು ಸಾಬೀತುಪಡಿಸಲು ಕೂಗಾಡಲು ಆರಂಭಿಸಿದರು. ಚರ್ಚೆ ಜಗಳದ ರೂಪ ಪಡೆಯಹತ್ತಿತು. ಆ ಗಾಂಜಾ ಸೇದುತ್ತಿರುವ ವ್ಯಕ್ತಿ ಮಾತ್ರ ಸುಮ್ಮನೆ ಚಿಲುಮೆ ಸೇದುತ್ತ ಕುಳಿತಿದ್ದ. ಕೊನೆಗೆ ಎಲ್ಲರೂ 'ನಿನಗ್ಯಾವುದು ಸರಿಯೆನಿಸುತ್ತೆ?' ಎಂದು ಅವನನ್ನು ಪ್ರಶ್ನಿಸಿದರು. ಅವನೆಲ್ಲಿ 'ಹಿಂದುವಾಗಿರುವನೋ' ಎಂಬ ಭಯ ಆ ಮುಸ್ಲಿಂನಲ್ಲಿ, ಅವನು 'ಮುಸ್ಲಿಂನಾಗಿದ್ದರೆ?' ಎನ್ನುವ ಅಳುಕು ಆ ಕ್ರಿಶ್ಚಿಯನ್ನಿಗೆ. ಅವನು 'ಕ್ರಿಶ್ಚಿಯಾನಿಟಿಗೆ ಸೇರಿದವನಾಗಿದ್ದರೆ?' ಎನ್ನುವ ಪ್ರಶ್ನೆ ಆ ಹಿಂದುವಿನ ಮನಸ್ಸಿನಲ್ಲಿ. ಅದಾಗಲೇ ರಾತ್ರಿಯ ಮೂರನೇ ಘಳಿಗೆ ಸರಿದು ಹೋಗಿತ್ತು. ಆ ಭಿಕ್ಷುಕನಂತಿರುವ ಗಾಂಜಾ ಸೇದುತ್ತಿರುವ ವ್ಯಕ್ತಿಯು ಅಲ್ಲಿದ್ದವರಿಗೆ ಸಮೀಪದ ಛತ್ರದ ಒಂದು ಕೋಣೆಯಲ್ಲಿ ಕರೆದುಕೊಂಡು ಹೋದ. ಕಣಿವೆಯ ಕಡೆಗಿರುವ ಕಿಟಕಿಗೆ ಹಾಳೆಯೊಂದನ್ನು ಸಂಪೂರ್ಣವಾಗಿ ಕಿಟಕಿ ಮುಚ್ಚುವಂತೆ ಅಂಟಿಸಿದ. ಹೊರಗಡೆ ಇನ್ನೂ ಕತ್ತಲಿತ್ತು. ಏನೇನೂ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಈಗ ಆ ಹಾಳೆಗೆ ಬೇರೆ ಬೇರೆ ಭಾಗಗಳಲ್ಲಿ ನಾಲ್ಕು ರಂಧ್ರಗಳನ್ನು ಮಾಡಿದ. ನಂತರ ನಮ್ಮಲ್ಲಿದ್ದವನೊಬ್ಬನನ್ನು ಕರೆದು ಆ ಎಲ್ಲ ರಂಧ್ರಗಳಿಂದಲೂ ಇಣುಕಿ ನೋಡಲು ಹೇಳಿದ. ಆ ವ್ಯಕ್ತಿ ಎಲ್ಲ ತೂತುಗಳಿಂದಲೂ ಕಣ್ಣಿಸಿ ಆಚೆ ಏನಿರಬಹುದೆಂದು ಕುತೂಹಲದಿಂದ ನೋಡಲು ಪ್ರಯತ್ನಿಸಿದ. ಆಮೇಲೆ, ಕಂದೀಲಿನಂತಹದನ್ನು ಕೆಳಗಿನ ರಂಧ್ರದ ಬಳಿ ಹಿಡಿದು ಮತ್ತೊಬ್ಬನನ್ನು ಆ ರಂಧ್ರದಿಂದಾಚೆ ನೋಡಲು ಹೇಳಿದ. ಇನ್ನೂ ರಾತ್ರಿಯ ಕತ್ತಲು ಕವಿದಿರುವಾಗಲೇ ಮುಂಜಾವಿನ ಮೊದಲ ಪಹರೆಯಲ್ಲಿ ಇನ್ನೂ ಬೆಳಕಾಗುವುದಕ್ಕೆ ಮೊದಲು ಮೂರನೇ ರಂಧ್ರದಿಂದ ನಮ್ಮಲ್ಲಿನ ಮೂರನೇ ವ್ಯಕ್ತಿಯನ್ನು ನೋಡಲು ಕರೆದ. ಕೊನೆಗೆ ಸಂಪೂರ್ಣ ಬೆಳಗಾದ ಮೇಲೆ ಆ ನಾಲ್ಕನೇ ರಂಧ್ರದಿಂದ ಕೊನೆಯವನಿಗೆ ನೋಡುವಂತೆ ಸೂಚನೆಯಿತ್ತ.

ಈಗ ಪ್ರತಿಯೊಬ್ಬರಿಗೂ ತಾವುಗಳು ಕಂಡದ್ದನ್ನೂ ಮತ್ತು ಅಲ್ಲಿಗೆ ಹೋಗಬೇಕಾದ ವಿಧಾನವನ್ನೂ ಕೇಳಿದ. ಮೊದಲನೆಯವನು "ಅಲ್ಲಿ ಏನೇನೂ ಇಲ್ಲ ಕತ್ತಲಿನ ಹೊರತಾಗಿ. ನೀನು ನನಗೆ ಮುಚ್ಚಿರುವ ಕಿಟಕಿಗೆ ಈ ಹಾಳೆ ಅಂಟಿಸಿ ಎಲ್ಲ ರಂಧ್ರಗಳಿಂದಲೂ ನೋಡಲು ಹೇಳಿದೆ" ಎಂದು ಆಕ್ಷೇಪಣೆಯಿತ್ತ.

ಎರಡನೇಯವನು "ಬಂಗಾರದ ಬಣ್ಣದ ಆ ಹೊಳೆ ಅದರಲ್ಲಿ ಹರಿಯುವ ನೀರು ಅದರಾಚೆಗೆ ಕಾಡು. ಅಬ್ಬಾ ! ಎಂಥ ಸೌಂದರ್ಯ. ಒಂದು ಚಿಕ್ಕ ದೋಣಿಯಿದ್ದರೆ ಆ ಹೊಳೆಯನ್ನು ದಾಟಿ ಅಲ್ಲಿಗೆ ತಲುಪಬಹುದು. ಇಲ್ಲದಿದ್ದರೆ ಸಾಧ್ಯವೇ ಇಲ್ಲ" ಎಂದು ತಾನು ಕಂಡದನ್ನು ಸಮರ್ಥಿಸಿದ. ಮೂರನೆಯವನು "ಅದೊಂದು ಕತ್ತಲಿನ ಕಾಡು. ದಾರಿ ಕಂಡುಕೊಳ್ಳುವುದು ಸುಲಭವೇನಲ್ಲ. ಆದರೂ ಅದು ಸುಂದರವಾದ ಶಾಂತ ಸ್ಥಳ ಎನಿಸುತ್ತೆ. ಅಲ್ಲಿಗೆ ಹೋಗಬೇಕಿದ್ದರೆ ಒಂದು ಬೆಳಕಿನ ವ್ಯವಸ್ಥೆ ಬೇಕೆ ಬೇಕು. ಬೆಳಕಿದ್ದರೆ ಮಾತ್ರ ಅಲ್ಲಿಗೆ ತಲುಪಬಹುದು"ಎಂದ. ನಾಲ್ಕನೆಯವನಿಗೆ ಕೇಳಲಾಗಿ "ಆಹ್ ! ಸ್ವರ್ಗ ವೆಂದರೆ ಇದೇನೋ ಏನೋ! ಹಿಮ ಪರ್ವತಗಳ ಮಧ್ಯ ಬೆಳೆದು ನಿಂತ ಹಚ್ಚಹಸಿರು ಕಾಡು. ಅದರೀಚೆಗೆ ಹರಿಯುವ ಈ ತೊರೆ. ಅದರ ಶುದ್ಧವಾದ ನೀರು, ಕಾಡಿನಲ್ಲಿ ಸ್ವಚ್ಛಂದವಾಗಿ ಹಾರಾಡುತ್ತಿರುವ ಪಕ್ಷಿಗಳು,





ಬಗೆಬಗೆಯ ಅರಳಿದ ಹೂಗಳು. ಓಹ್, ಇನ್ನೂ ಏನೇನೋ. ಆದರೆ ಅಲ್ಲಿಗೆ ಹೋಗಲು ಮೇಲಿನಿಂದ ಹಾರಿಹೋಗುವಂತಹ ವಾಹನವೇ ಬೇಕು. ಪುಷ್ಪಕ ವಿಮಾನದ ತರಹದ್ದು" ಎಂದು ಮಾತು ಮುಗಿಸಿದ.

ಎಲ್ಲರನ್ನೂ ಆಲಿಸಿದ ನಂತರ ಆ ಗಾಂಜಾ ಸೇದುತ್ತಿರುವ ವ್ಯಕ್ತಿ ಆ ಕಿಟಕಿಗೆ ಅಂಟಿಸಿರುವ ಹಾಳೆಯನ್ನು ಹರಿದು ಕಿತ್ತು ತೆಗೆದ. ಶುಭ್ರ ಬೆಳಕಿನಲ್ಲಿ ಈಗ ಆ ಕಿಟಕಿಯಾಚೆಗೆ ಕೊನೆಯವನು ಹೇಳಿದ್ದೆಲ್ಲವೂ ಅಲ್ಲದೇ ಇನ್ನೂ ಅನೇಕ ದೃಶ್ಯಗಳಿದ್ದವು. ಮೊದಲನೆಯವನು ತಾನು ಏನು ಕಂಡಿರಲೇ ಇಲ್ಲವಲ್ಲ ಎಂದು ಯೋಚಿಸುತ್ತಿರುವಾಗಲೇ ಆ ಭಿಕ್ಷುಕನಂತಿರುವ ವ್ಯಕ್ತಿ ನಮ್ಮೆಲ್ಲರನ್ನುದೇಶಿಸಿ "ನಿಮ್ಮಲ್ಲಿ ಮೊಟ್ಟಮೊದಲಿಗೆ ಎಲ್ಲ ರಂಧ್ರಗಳಿಂದಲೂ ನೋಡುವ ಅವಕಾಶವನ್ನು ಇವರಿಗೆ ನೀಡಿದ್ದೆ. ಆದರೆ ಈ ಗಾಢಾಂದಕಾರದಲ್ಲಿ ಮಂಜಿನ ಹವೆಯಲ್ಲಿ ಎದುರಿಗೆ ನಿಂತಿರುವ ವ್ಯಕ್ತಿಯೇ ಕಾಣದಿರುವಾಗ ಮಧ್ಯರಾತ್ರಿಯ ವೇಳೆ ಅವರಿಗೇನೂ ಕಾಣಿಸದೇ ಇದ್ದದ್ದು ಸುಳ್ಳಲ್ಲ. ಆದರೆ ಅವರು ಸ್ವಲ್ಪ ಪ್ರಯತ್ನಪಟ್ಟಿದ್ದರೆ ಕಾಣಿಸುತ್ತಿತ್ತೇನೋ ! ಆದರೆ, ಇವರೊಬ್ಬ ನಾಸ್ತಿಕರು. ಅವರಿಗೆ ಕಿಟಕಿ ಮುಚ್ಚಿದೆ, ಇದರಾಚೆಗೆ ಏನೂ ಇಲ್ಲ ಎಂದೇ ಕಲ್ಪನೆ. ಅವರಿಗೆ ಯಾವುದೇ ರಂಧ್ರದಿಂದಲೂ ನೋಡಲು ಹೇಳಿದರೂ ಆಚೆಗೆ ಏನೂ ಕಾಣಿಸದು."



"ಎರಡನೇಯವರು, ನಾನು ಹಚ್ಚಿದ ಆ ದೀಪದ ಬೆಳಕಿನಲ್ಲಿ ಅತ್ಯಂತ ಕೆಳಗಿನ ರಂಧ್ರದಿಂದ ನೋಡಿದ ಇವರಿಗೆ ಆ ದೀಪದ ಬೆಳಕಿನಲ್ಲಿ ಎದುರಿಗೇ ಹರಿಯುತ್ತಿರುವ ಆ ಚಿಕ್ಕ ತೊರೆ ದೊಡ್ಡ ಹಳ್ಳ-ನದಿಯಂತೆ ಕಂಡಿದ್ದು ತಪ್ಪೇನಲ್ಲ. ಅದಕ್ಕೇ ಅವರು ಹೇಳಿದ್ದು ಅಲ್ಲಿಗೆ ಹೋಗಲು ಒಂದು ದೋಣಿಯಾದರೂ ಬೇಕೇ ಬೇಕು ಎಂದು." "ಇನ್ನು ಮೂರನೇಯ ಉತ್ತರವನ್ನೇ ಕೇಳಿ. ಅರೆ ಬೆಳಕಿನಲ್ಲಿ ಎತ್ತರದ ಆ ರಂಧ್ರದ ಮೂಲಕ ನೋಡಲು ಹೇಳಿದಾಗ ಅವರಿಗೆ ಈ ತಳದಲ್ಲಿ ಹರಿಯುತ್ತಿರುವ ತೊರೆ ಕಾಣಿಸದೇ ಹೋಯಿತು. ದೂರದ ಕಾಡು ಮರಗಳು ಮಾತ್ರ ಕಂಡವು. ಇನ್ನು ಅಲ್ಲಿ ಕತ್ತಲಿರುವುದನ್ನು ಕಂಡು ಅಲ್ಲಿಗೆ ಹೋಗಲು ಬೆಳಕು ಬೇಕೇ ಬೇಕು ಎಂಬುದು ಅವರ ಧೃಡ ಮಾತು". "ಕೊನೆಯದಾಗಿ, ನಾಲ್ಕನೆಯವರು ಸ್ವಚ್ಛಂದ ಬೆಳಕಿನಲ್ಲಿ ಈ ಮಧ್ಯದ ತೂತಿನಿಂದ ಅದರಾಚೆಗಿರುವ ಸೃಷ್ಟಿಯನ್ನು ಕಂಡವರು. ಹಿಮದ ಕಣಿವೆ ತಿಳಿನೀರಿನ ತೊರೆ, ಕಾಡುಗಿಡ ಪಕ್ಷಿಗಳು. ಅಷ್ಟೊಂದು ರಮ್ಯಮಯವಾದ ದೊಡ್ಡದಾದ ಸ್ಥಳಕ್ಕೆ ಸಹಜವಾಗಿಯೇ ಪುಷ್ಪಕ ವಿಮಾನದಂತಹ ಸಾಧನದ ಅವಶ್ಯಕತೆಯನ್ನು ಅರಿತು ಹೇಳಿದರು. ತಲುಪಬಹುದು ಎನ್ನುವುದನ್ನು ಸರಿಯಾಗಿ ಹೇಳಿಲ್ಲ"

ಈಗ ಈ ಕಿಟಕಿಯಾಚೆಗಿರುವುದು ಸ್ವರ್ಗ/ದೇವರು ಎಂತಲೂ, ಈ ರಂಧ್ರಗಳನ್ನು ನಿಮ್ಮ ನಂಬಿಕೆಯ ಕಣ್ಣುಗಳಂತಲೂ ಮತ್ತು ಅಲ್ಲಿಗೆ ತಲುಪುವ ದಾರಿಯನ್ನು ಭಕ್ತಿ ಮಾರ್ಗವೆಂತಲೂ ಭಾವಿಸಿದರೆ ನಿಮಗೆಲ್ಲ ತಿಳಿಯಬಹುದು. ಕಿಟಕಿಯಾಚೆಗೆ ಇರುವುದು ಒಂದೇ ಆಗಿದ್ದರೂ ಎಲ್ಲರೂ ಬೇರೆ ಬೇರೆ ನಂಬಿಕೆಯೆಂಬ ಕಣ್ಣುಗಳ ರಂಧ್ರದಿಂದ ತಮಗೆ ಕಂಡದ್ದಷ್ಟನ್ನೇ ನೋಡಿ, ತಮಗೆ ಕಂಡದ್ದಕ್ಕೆ ಪೂರಕವಾಗಿ ಅಲ್ಲಿಗೇ ತಲುಪಲು ಬೇಕಾಗುವ ಮಾರ್ಗವೇ 'ನೈಜ' ಮಾರ್ಗ, ಉಳಿದೆಲ್ಲ ಸುಳ್ಳು ಎಂದು ಸಾಧಿಸುತ್ತಾರೆ. ಜ್ಞಾನದ ಬೆಳಕಿರದೇ ಹೋದಾಗ ಏನೂ ಕಾಣದೇ ಮನುಜ ನಾಸ್ತಿಕನೂ ಆಗಬಹುದು. ಇನ್ನು ನಾಲ್ಕನೆಯವರು ನೋಡಿದ್ದೂ ಪೂರ್ಣವಲ್ಲ" ಎಂದು ಹೇಳಿ ಆ ಗಾಂಜಾ ಸೇದುತ್ತಿದ್ದ ಭಿಕ್ಷುಕನಂತಿದ್ದ ವ್ಯಕ್ತಿ ನಮ್ಮೆಲ್ಲರನ್ನು ಕರೆದುಕೊಂಡು ಛತ್ರದಿಂದ ಹೊರಗೆ ಕರೆದೊಯ್ದನು. ನಾವೆಲ್ಲರೂ ಆ ಸೃಷ್ಟಿಯ ಸೌಂದರ್ಯದ ಮಧ್ಯೆಯೇ ನಿಂತಿದ್ದೆವು. ಆ ಪ್ರಕೃತಿಯ ಸೊಬಗಿನ ಬೆಳ್ಳಗೆ ಮಿಂಚುತ್ತಿರುವ ಹಿಮ ಕಣಿವೆ, ತೊರೆ, ಕಾಡು, ಪಕ್ಷಿಗಳು, ಹೂಗಳ ಮಧ್ಯೆಯೇ ನಾವೆಲ್ಲರಿದ್ದೆವು.

ಅವನು ಹೇಳುತ್ತ ಹೋದ "ಜ್ಞಾನದ ಬೆಳಕಿನಲ್ಲಿ ಈ ರಂಧ್ರಗಳಂತಿರುವ ಕಣ್ಣುಗಳ ಮೂಲಕ ತಿಳುವಳಿಕೆಯೆಂಬ ನೋಟದಿಂದ ಹೊರಗೆ ಇಣುಕಿ ನಮ್ಮ ಸುತ್ತಮುತ್ತ ಕಟ್ಟಿಕೊಂಡಿರುವ ಗೋಡೆಗಳಾಚೆ ಬಂದರೆ ನಿಮಗೆ ಗೊತ್ತಾಗುತ್ತದೆ ಸ್ವರ್ಗ/ದೇವರು ಇನ್ನೆಲ್ಲಿಯೂ ಇಲ್ಲ; ಅದು ಇಲ್ಲೇ ಇದೆ"

**(ಸ್ಫೂರ್ತಿ: ಲಿಯೋ ಟಾಲಸ್ಟಾಯ್ ಮತ್ತು ಒಂದು ಈ-ಮೇಲ್)**

# ಗುರುವಿನ ಅರಿವೆಂಬ ತೈಲದಿಂದಲೇ ಶಿಷ್ಯರು ನಂದಾದೀಪವಾಗಿ ಬೆಳಗಬೇಕು

**ಅ ಆ.... ಮೊದಲಕ್ಷರದಿಂದ ಆರಂಭಗೊಂಡು ಜೀವನದ ಅಗಣಿತ ಅರಿಯುವಲ್ಲಿಯವರೆಗೂ ಗುರುವಿನ ಪಾತ್ರ ಅಪಾರ. ಶಿಕ್ಷಣ ವ್ಯಾಪಾರೀಕರಣಗೊಂಡಿರುವ ಈ ಹೊತ್ತಿನಲ್ಲಿ ತಮ್ಮ ವಿದ್ಯಾಭ್ಯಾಸದ 'ಆ ದಿನಗಳ' ಮೆಲುಕು ಹಾಕಿ ಗುರುವಿಗೆ ನಮನ ಸಲ್ಲಿಸುತ್ತಿದ್ದಾರೆ**

**ಸುಧಾ .ಎಂ.**



"ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠ ಶಾಲೆ" ಇದು ಅನಾದಿಕಾಲದಿಂದ ಬೆಳೆದು ಬಂದ ಸಂಸ್ಕಾರ ಪದ್ಧತಿ. ಮಕ್ಕಳ ಕಲಿಕಾ ಹಂತ ಪ್ರಾರಂಭವಾಗೋದು ಮನೆಯಿಂದಲೆ. ಆದರೂ ತದನಂತರದಲ್ಲಿ ನಮಗೆ ಶಿಕ್ಷಣ ಕೊಡುವ ದೇಗುಲ ಶಿಕ್ಷಕರು ಮತ್ತು ಶಾಲೆ. ಮೊದಲ ಹಂತದ ಶಿಕ್ಷಣ ಪಡೆವಾಗ ನಮಗೆ ಮೂಲವಾಗಿ ಮನಸ್ಸಲ್ಲಿ ನಿಲ್ಲುವವರು ಗುರುಗಳು. ಮನೆಯ ನಂತರ ನಾವು ತೀರಾ ಹಚ್ಚಿಕೊಂಡು ಗೌರವಿಸುವುದು ಕೂಡಾ ಉತ್ತಮ ಶಿಕ್ಷಕರನ್ನ. ಬಡವ-ಬಲ್ಲಿದ, ಮೇಲು-ಕೀಳು ಎಂಬ ಬೇಧವಿರದೇ ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಿ ಮಕ್ಕಳ ಜೊತೆ ಮಕ್ಕಳಾಗಿ ನಲಿದು ಸಮಯ ಬಂದಾಗ ಕಟ್ಟು ನಿಟ್ಟಾಗಿ ವರ್ತಿಸುವ ಗುರುಗಳು ಅದಾಗಲೇ ನಮ್ಮಲ್ಲಿ ಸದಾ ನೆಲೆಯಾಗಿರುತ್ತಾರೆ. ಅಂತ ಆದರ್ಶ ಉತ್ತಮ ವಿಚಾರಶೀಲ ಗುರುಗಳಿಗೆ ನನ್ನ ಅನಂತ ನಮನ.

ನಾನು ನಾಲ್ಕನೆ ತರಗತಿ ಓದುವಾಗ ನಮ್ಮೂರಿಗೆ ಇಬ್ಬರು ಶಿಕ್ಷಕರು ಬಂದರು. ಆಗ ನಮ್ಮಷ್ಟು ಬುದ್ಧಿವಂತರು ಯಾರೂ ಇರಲಿಲ್ಲ. ನೆಟ್ಟಗೆ ಕೂಡಿಸುವ ಕಳೆಯುವ ಲೆಕ್ಕ ಕೂಡಾ ಬರದಷ್ಟು ಜಾಣರು ನಾವಾಗಿದ್ದೆವು. ಅದ್ಹೇಗೆ ನಾಲ್ಕನೆ ತರಗತಿಗೆ ಬಂದೆವೋ ಕಾಣೆ. ಆ ಸಮಯದಲ್ಲಿ ಹೊಸದಾಗಿ ಬಂದ ಗುರುಗಳಿಗೆ ನಮ್ಮ ಬುದ್ಧಿವಂತಿಕೆ ಎಷ್ಟಿದೆ ಎಂಬುದು ಅರಿವಾಗಿ ಹೋಗಿತ್ತು. ಆದರೂ ಅವರು ಕೋಪಿಸಿ ಕೊಳ್ಳಲಿಲ್ಲ. ಅವರನ್ನ ನೋಡಿಯೇ ಹೆದರುತ್ತಿದ್ದ ನಮ್ಮನ್ನ ವಿನಯದಿಂದ ಮಾತಾಡಿ ನಮ್ಮನ್ನು ಬುದ್ಧಿವಂತರನ್ನಾಗಿ ಮಾಡಿದ ಅವರ ಸಹನೆಗೆ ಎಲ್ಲರೂ ಮೆಚ್ಚಲೇ ಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗೆ ಅರ್ಥವಾಗುವಂತೆ ಒಂದೇ ಲೆಕ್ಕವನ್ನ ಹತ್ತಾರು ಬಾರಿ ಮಾಡಿ ತೋರಿಸುತ್ತಿದ್ದರು. ಅದಾಗ್ಯೂ ಬರದಿದ್ದ ಪಕ್ಷದಲ್ಲಿ ದಂಡಿಸುತ್ತಿದ್ದರು, ಗದರಿಸುತ್ತಿದ್ದರು. ಎಷ್ಟೋ ಬಾರಿ ಏಟು ತಿಂದು ಮುಸಿ ಮುಸಿ ಅತ್ತಿದ್ದು ಇತ್ತು. ಆಗೆಲ್ಲ ನೀವೆಲ್ಲ ಜಾಣರಾಗಬೇಕೆಂದು ನನ್ನ ಅಭಿಲಾಷೆ ಎಂಬ ಸಮಾಧಾನದ ಮಾತಾಡಿ ಮನವೊಲಿಸುವ ಯತ್ನ ಮಾಡುತ್ತಿದ್ದರು. ಈಗ ಅಂತ ಶಿಕ್ಷಕರು ಅಪರೂಪಕ್ಕೆ ಕಾಣಸಿಗುತ್ತಾರೆ.

ದೂರದಿಂದ ಬರುವ ಯಾವ ಶಿಕ್ಷಕರೂ ಈ ಕುಗ್ರಾಮಕ್ಕೆ ಬರುತ್ತಿರಲಿಲ್ಲ. ಏಕೆಂದ್ರೆ ನನ್ನೂರಿಗೆ ವಾಹನ ಸಂಪರ್ಕವೇ ಇರಲಿಲ್ಲ. ಅಂತಹ ಸಂದರ್ಭಗಳಲ್ಲಿ ಮಂಡ್ಯದಿಂದ ಈ ಊರಿಗೆ ವರ್ಗವಾಗಿ ಬಂದಿರುವುದಾಗಿ ತಿಳಿಸಿದ ನೆನಪು. ಹರಸಾಹಸ ಮಾಡಿ ಈ ಊರಿಗೆ ವರ್ಗವಾಗಿ ಬಂದು ಒಳ್ಳೆಯ ಶಿಕ್ಷಣ ಕೊಡುವಲ್ಲಿ ಯಶಸ್ವಿಯಾದವರು. ನಮ್ಮ ಬುದ್ಧಿ ಮತ್ತೆಗೆ ಸಾಣೆ ಹಾಕಿ ಹರಿತಗೊಳಿಸಿದ ಆ ಇಬ್ಬರು ಶಿಕ್ಷಕರನ್ನು ಮರೆಯುವುದಾದರೂ ಎಂತು? ಪುಸ್ತಕ ಪಾಟಿಗಳಿಗೂ ಗತಿಯಿಲ್ಲದ ಕಾಲದಲ್ಲಿ ಅದನ್ನ ಪೇಟೆಗೆ ಹೋದಾಗ ತಮ್ಮದೇ ಖರ್ಚಲ್ಲಿ ತಂದು ಕೊಟ್ಟು ಕಲಿಕೆಗಾಗಿ ಪ್ರೋತ್ಸಾಹ ಕೊಟ್ಟು ಮುನ್ನಡೆಸಿದವರು. ಶಿಸ್ತು ಸಂಯಮ, ಬೇಧ, ಭಾವ ಎಲ್ಲವನ್ನೂ ದೂರ ಸರಿಸಿ ಒಟ್ಟಾಗಿ ಕಲೆತು ಕಲಿಯಬೇಕೆಂದು ಜಾತಿ ಮತದ ಕಟ್ಟು ಪಾಡಿನಿಂದ ಹೊರಬಂದು ಕೆಟ್ಟ ಮನಸ್ಸನ್ನ ಶುದ್ಧೀಕರಿಸಿದವರು. ಅಂತ ಗುರುಗಳಿಗೆ ನಾವೇನು ಕೊಟ್ಟರೂ ಕಡಿಮೆ. ಗುರುವೆಂದರೆ ಭಯ, ಭಕ್ತಿ ಅದೆಷ್ಟು ಮನೆ ಮಾಡಿತ್ತೆಂದರೆ, ಗುರುವನ್ನ ಎಲ್ಲಾದರೂ ಕಂಡೆವೆಂದರೆ ಭಯದಿಂದಲೇ ನಮಸ್ಕರಿಸಿ ಹೋಗುತ್ತಿದ್ದೆವು. ಎಂದೂ ಆ ಗುರುಗಳು








ಕೆಟ್ಟದ್ದಾಗಿ ದಂಡಿಸಿದ ನೆನಪಿಲ್ಲ. ಆದರೂ ಅವರನ್ನು ಕಂಡಾಗ ಪೂಜ್ಯತೆಯ ಭಾವದಲ್ಲಿ ಭಯವೂ ಸೇರಿತ್ತು.

ಒಮ್ಮೆ ಪ್ರವಾಸಕ್ಕೆ ಹೋಗುವುದೆಂದು ಗುರುಗಳು ತಿಳಿಸಿದರು. ಆಗ ಇಡೀ ಶಾಲೆಯೇ ಕೇಕೆ ಹಾಕಿ ಕುಣಿಯಿತು. ನಮ್ಮೂರ ಹತ್ತಿರದ ಆಸು ಪಾಸು ಊರು ಮಾತ್ರ ನೋಡಿದ ನಮಗೆ ಬೇರೆ ಊರಿಗೆ ಬಸ್ಸಲ್ಲಿ ಹೋಗುವುದೆಂದರೆ ಅದೆಷ್ಟು ಆನಂದವಾಗಿರಬೇಡ. ನಾನೂ ಹೋಗುವ ಕನಸ ಕಂಡೆ. ಮನೆಗೆ ಹೋಗಿ ಅಪ್ಪನ ಕೇಳಿದರೆ. ಈಗ ಬೇಡ ಮುಂದಿನ ಸಲ ಹೋಗುವಿಯಂತೆ ಎಂದು ಬಿಟ್ಟರು. ಬರೇ ಇಪ್ಪತ್ತೈದು ರೂಗಳಾಗಿದ್ದವು. ನೀರಸ ಭಾವದಿಂದ ಶಾಲೆಗೆ ಬಂದು ಸಪ್ಪೆ ಮೋರೆ ಹಾಕಿಕೊಂಡು ಅಪ್ಪ ಬೇಡವೆಂದ ವಿಷಯ ಗುರುಗಳಿಗೆ ತಿಳಿಸಿದೆ. ಹೋಗ್ಲಿ ಬಿಡು, ನೀನು ಬಾ, ಆ ಇಪ್ಪತ್ತೈದು ರೂ. ನಾನೇ ಕೊಡ್ತೀನಿ. ಎಲ್ಲ ಹೋಗೋಣ. ಅಪ್ಪನಿಗೆ ಹೋಗಿ ಹೇಳು ಈ ವಿಷಯಾನ ಅಂದ್ರು. ನನ್ನಂತ ಬಡ ಸ್ಥಿತಿಯಲ್ಲಿದ್ದ ಅದೆಷ್ಟೋ ಹುಡುಗರಿಗೆ ಒಂದಲ್ಲ ಒಂದು ರೀತಿಯ ಸಹಾಯ ಮಾಡಿದ್ದಾರೆ. ಅಂತ ಗುರುಗಳು ಇಂದು ಸಿಗೋದು ಅಪರೂಪ. ಆಗ ಶಿಕ್ಷಣದ ಮಹತ್ವ. ಕಲಿಕೆ ಮುಖ್ಯವಾಗಿತ್ತೇ ಹೊರತು. ಬರೀ ವ್ಯಾಪಾರೀಕರಣವಾಗಿರಲಿಲ್ಲ. ಈಗನಿಸತ್ತೆ. ಅವರ ಪ್ರೀತಿಯ ಅಂತಃಕರಣ ತುಂಬಿದ ನಿಸ್ವಾರ್ಥತೆ. ವಿಶಾಲತೆಯ ಬದುಕು ತೆರೆದಿಟ್ಟ ಅವರ ಬಗ್ಗೆ ನಾನೇನೆ ಹೇಳಿದರು ಅದು ತೃಣಮಾತ್ರ. ಅಂದು ಕಲಿಸಿದ ಪಾಠ, ನೀತಿ, ನಿಯತ್ತುಗಳು ಈಗಲೂ ಮನೆ ಮಾಡಿದೆಯೆಂದರೆ ಅದರ ಮೂಲ ಗುರುಗಳೆ. ಆಗ ಕಲಿಸಿದ ಎಲ್ಲ ಗುಣಾವಗುಣಗಳು ನಮ್ಮ ಮನದ ಕದ ಈಗಲೂ ತಟ್ಟುತ್ತಿರುತ್ತದೆ. ಎಚ್ಚರಿಸುತ್ತದೆ. ಪ್ರಾಥಮಿಕ ಹಂತದಲ್ಲಿ ಕಲಿಸಿದ ಸಂಸ್ಕಾರಯುತವಾದ ನೀತಿ ಪಾಠವೇ ನಾಗರೀಕ ಜೀವನಕ್ಕೆ ಮುನ್ನುಡಿಯಾಗುತ್ತದೆ. ಆದ್ದರಿಂದ ಪ್ರತಿಯೊಬ್ಬನ ಜೀವನದ ಯಾನದಲ್ಲೂ ಗುರುವೆಂಬ ಮಾರ್ಗದರ್ಶಕ ಇದ್ದೇ ಇರುತ್ತಾರೆ. ಎಷ್ಟೇ ದೊಡ್ಡ ಹುದ್ದೆಯನ್ನು ಅಲಂಕರಿಸಿದರೂ ಅದರ ಮೂಲ ಬೇರು ಇರುವುದು ಪ್ರಾಥಮಿಕ ಶಿಕ್ಷಣ ಮತ್ತು ಗುರುವೇ ಆಗಿರುತ್ತಾರೆ.

ಈಗ ಕಾಲ ಬದಲಾಗಿದೆ. ಶಿಕ್ಷಕರ ರೀತಿ-ನೀತಿ ಬದಲಾಗಿದೆ. ಸರ್ಕಾರದ ಕಾನೂನು ಕಟ್ಟಳೆಯಲ್ಲಿ ಶಿಕ್ಷಕ ಉರಿಯುತ್ತಿದ್ದರೆ, ಮಕ್ಕಳು ಬೇಯುವಂತಾಗಿದೆ. ಕೆಲ ಶಿಕ್ಷಕರು ಶಾಲೆಗೆ ತಾನೇ ಸರ್ವಾಧಿಕಾರಿಯೆಂದು ವರ್ತಿಸುತ್ತಾರೆ. ತನ್ನ ಮೂಗಿನ ನೇರಕ್ಕೆ ಇನ್ನುಳಿದ ಶಿಕ್ಷಕರು ಇರಬೇಕೆಂದು ವರ್ತಿಸುತ್ತಾರೆ. ಒಂದು ಶಾಲೆಯಲ್ಲಿ ಒಬ್ಬ ಶಿಕ್ಷಕ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ ಮೇಲೆ ತನ್ನ ಕಂತ್ರಿಬುದ್ಧಿ ಬಿಚ್ಚುತ್ತ ಊರವರ ಕೆಂಗಣ್ಣಿಗೆ ಗುರಿಯಾಗುತ್ತಾರೆ. ಆದರ್ಶ ಶಿಕ್ಷಕರಾಗಿ ಹೋದವರೂ ಇದ್ದಾರೆ. ಸರಸ್ವತಿಯ ಮಂದಿರವೆಂಬ ಭಾವದಿಂದ ಗುರುಕುಲ ಆರಂಭವಾಗಿ ಶಿಕ್ಷಣದ ಮಹತ್ವಕ್ಕಾಗಿ ಶಾಲೆ ತೆರೆದು ಅ ಆ.. ಮೊದಲಕ್ಷರದಿಂದ ಜೀವನದ 'ಅ' ಗಣಿತ ಅರಿಯುವಲ್ಲಿಗೂ ಮಹತ್ತರ ಪಾತ್ರ ವಹಿಸೋದು ಗುರು ಮತ್ತು ಓದು, ಬರಹ. ಈಗ ಗುರುಗಳ ಕೆಲಸ ಬಹು ಒತ್ತಡದಲ್ಲಿ ಸಿಲುಕಿ ನರಳುತ್ತ ವಿಷಯ ಕಲಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಕ್ಕಳ ಬಗ್ಗೆ ಕಾಳಜಿ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಾಲದ ಮಿತಿಯೊಳಗೆ ಪಾಠ ಮುಗಿಸಲೂ ಆಗುತ್ತಿಲ್ಲ. ಗುರುಶಿಷ್ಯರ ಸಂಬಂಧವೂ ಕ್ಷೀಣವಾಗುತ್ತಿದೆ.

ಏನೇ ಇರಲಿ, ಸುಜ್ಞಾನಿಯಾಗಲು ಬೇಡವೆ ಬೆಳಕು ನೀಡುವ ವಿದ್ಯಾ ದೇಗುಲ. ಮುದ್ದು, ಮುಗ್ಧ ಮಕ್ಕಳಿಗೆ ಮೇರು ಪರ್ವತವಲ್ಲವೇ ಶಿಕ್ಷಣ ಕೊಡುವ ಗುರು.? ಆ ಪರ್ವತವನ್ನು ಇನ್ನೂ ಸುಂದರಗೊಳಿಸಲು, ಪ್ರಕಾಶಮಾನವಾಗಿ ಕಾಣಬೇಕಾದರೆ ಸು-ಜ್ಞಾನ ಪಡೆದ ಶಿಷ್ಯ ನಂದಾದೀಪವಾಗಿ ಬೆಳಗ ಬೇಕಲ್ಲವೆ? ಅರಿವೆಂಬ ತೈಲ ಧಾರಾಕಾರವಾಗಿ ಸುರಿವಾಗ, ಶಿಷ್ಯ ಬೆಳಕ ಪ್ರವಹಿಸಬೇಕಾದರೆ, ತೈಲವನ್ನು ಜಾಣ್ಮೆಯಿಂದ ಬಳಸಿಕೊಳ್ಳಬೇಕಲ್ಲವೆ?" ಸುಶಿಕ್ಷಿತ ಪ್ರಜೆಯಾಗಿ ಬೆಳೆಯ ಬೇಕಾದರೆ, ಗುರುವಿನಿಂದ ಅರಿವಾಗಿ ಸಜ್ಜನಿಕೆ ಬೆಳೆಸಿಕೊಳ್ಳಬೇಕಲ್ಲವೆ? ಕ್ಷೇತ್ರ ಯಾವುದಾದರೂ ಇರಬಹುದು. ಇಡೀ ಮನುಷ್ಯ ಸಮುದಾಯಕ್ಕೆ ವಿಶ್ವ ಮಾನವ ಸಂದೇಶ ಸಾರಿ ಶಾಂತಿಯ ಸಹಬಾಳ್ವೆಗೂ ಬೆಳಕು ಚೆಲ್ಲಲು ಬೇಕು ಒಬ್ಬ ಗುರು, ಸ್ವಾಮಿ ನಿಷ್ಠೆಯ ಶಿಷ್ಯ.

**– ಸುಧಾ ಎಂ., ಕರ್ಕಿಸವಲು**

## ಲಲಿತ ಲಹರಿ

# ಹಣ್ಣು ತರಕಾರಿಗಳ ರಸ್ತೆಯಲ್ಲಿ

**– ಕಪಿಲಾ ಶ್ರೀಧರ್, ಬೆಂಗಳೂರು**



"ನಮ್ಮೂರಲ್ಲಿ ಹತ್ತು ರೂಪಾಯಿಗೆ ಮೂರು ಮೊಳ ಹೂವು ಕೊಡ್ತಾರೆ. ಇಲ್ಲೇನು ಹೆಚ್ಚುಗಾರಿಕೆ?" ಅಂತ ಮುಖ ಸಿಂಡರಿಸಿ ಕೇಳ್ತಿದ್ದ ಆಕೆ, ಹೂವಿನವರ ಯಾವುದೇ ಸಮಜಾಯಿಷಿಗೆ ಒಪ್ಪದೇ ಎರಡು ಮೊಳವಾದ್ರೂ ಕೊಡ್ಲೇಬೇಕು ಅಂತ ಹಠ ಹಿಡಿದು, ಜುಂಗಾಡಿ ಅಂತೂ ಇಂತೂ ಹೂವು ತೊಗೊಂಡ್ರು. ನೋಡ್ತಾ ಇದ್ರೆ ನನಗೆ ಒಳಗೆಲ್ಲೋ ಖುಷಿ, 'ಚೌಕಾಸಿ' ವ್ಯಾಪಾರ ಬೆಂಗಳೂರಿಗೆ ಕೊಟ್ಟಿರೋ ಆ ಸ್ವದೇಶಿ ಕಳೆ ನಂಗೆ ತುಂಬಾನೇ ಸಂತೋಷ ಕೊಡ್ತಿತ್ತು. ಕೇಳಿದಷ್ಟು ದುಡ್ಡು ಕೊಟ್ಟು, ಲೇಬಲ್‌ಗಳಿಂದಲಂಕೃತವಾದ ತರಕಾರಿ, ಹಣ್ಣಿನ ಪಾಕೇಟ್‌ಗಳೇ ತುಂಬಿರೋ ಅಂಗಡಿಗಳ ಮಧ್ಯೆ ತನ್ನತನ ಉಳಿಸಿಕೊಂಡಿರೋ ಜಯನಗರ, ಗಾಂಧೀಬಜಾರ್‌ಗಳ ಅಂಗಡಿಗಳು ತಮ್ಮ ದೇಸೀ ಸೊಗಡಿಂದ, ತಮ್ಮ ವೈಶಿಷ್ಟ ಪೂರ್ಣವಾದ ಮಾಲಿಕರುಗಳಿಂದ ಕಂಗೊಳಿಸುತ್ತಾ ಇರುತ್ವೆ, ಅನ್ಸತ್ತೆ. ಚೆಂದದ ತುರುಬಿಗೆ ಒಂದಷ್ಟು ಹೂ ಸಿಕ್ಕಿಸಿ, ಬೇಕು–ಬೇಡ ಅನ್ನೋ ಎಲ್ಲರಿಗೆ "ಹೂ ಬೇಕೇ ಬೇಕು" ಅನ್ಸೋ ಹಾಗೆ ಮಾಡೋ ಈ ನಮ್ಮ ಹೂವಮ್ಮಂದಿರು ನಿಷ್ಟುರತೆಗೂ ಹೆಸರಾದವ್ರು. ಗಿಲೀಟು ಮಾತಾಡಿ ಮೆಚ್ಚಿಸೋದಂದ್ರೆ ಇವರಿಗಾಗದು, ಇವರದೇನಿದ್ರೂ ಸಾದಾ–ಸಪಾಟು ಮಾತು. ಹೂವು ತೊಗೊಂಡು ಒಳ್ಳೇ ಮಾತಿಂದ ಸಖ್ಯ ಸಾಧಿಸಿರೋ ಹೆಂಗಸರಿಗೆ ಒಂದಷ್ಟು ಉದ್ದ ಘಮ ಘಮಿಸೋ ಮಲ್ಲಿಗೆ ಜಾಜಿಯ ಕೊಸರು ಕೊಡೋ ಇವ್ರಿಂದಲೇ ನನ್ನೂರು ಇನ್ನೂ ಉಸಿರಾಡ್ತಿದೆ. ಅಲ್ಲಲ್ಲಿ ಮೋಡದಂಚಲ್ಲಿ ಕಾಣೋ ಬೆಳ್ಳಿ ಕೋಲ್ಮಿಂಚಿನಂತೆ, ಕೊಳ್ಳುಬಾಕ ಸಂಸ್ಕೃತಿ ನಮಗೇನು ಕಲಿಸಿತೋ ಗೊತ್ತಿಲ್ಲ ಆದ್ರೆ ನಮ್ಮಲ್ಲಿನ್ನೂ ಕೈಚೀಲ ಹಿಡಿದು ಹೂ ಹಣ್ಣು ತರಕಾರಿ ತರೋ ಪದ್ಧತಿಯನ್ನು ಜೀವಂತವಾಗಿಟ್ಟುಕೊಂಡಿರೋ ಎಲ್ಲರ ಗುರಿ ಈ ರೀತಿ ಗಾಂಧೀಬಜಾರ್, ಜಯನಗರದಂತಹ ಮಾರ್ಕೆಟ್‌ಗಳು. ನೋಡೋ ಪ್ರತಿ ಕ್ಷಣವೂ ಮನಸ್ಸಿಗೆ ಉಲ್ಲಾಸ ತುಂಬೋ ಈ ರಸ್ತೆಗಳು ನಮಗೇನು ಹೇಳ್ತವೆ ಅಂತೀರೀ? ಹೊಳೆ ಹೊಳೆವ ದೀಪಗಳ ಸಾಲಿಂದ ಕಂಗೊಳಿಸೋ ಅಂಗಡಿಗಳ ಬೆನ್ನಲ್ಲೇ ಈ ತರಕಾರಿ, ಹೂವು, ಹಣುಗಳ ಸಾಲು ಸಾಲು ಗುಡ್ಡೆ ಇದೆ. ಮುಟ್ಟಿ ನೋಡಿ ಬೆಲೆ ಕೇಳಿ ಚೌಕಾಶಿ ಮಾಡಿ ಖರೀದಿಸಿ ಖುಷಿ ಪಡೋದಿದ್ಯಲ್ಲ ಅದು ತುಂಬಾ Unique ಆಗಿರೋ ಅನುಭವಗಳು. ಹಾಗಾಗೇ ನನ್ನೂರಲ್ಲಿನ್ನೂ ಜನ ತುಂಬಾ ಯಾಂತ್ರಿಕ ಬದುಕಿಗೆ ಒಗ್ಗಿಕೊಂಡಿಲ್ಲ. ಕೆಲಸದಲ್ಲಿ ಮುಳುಗಿರೋರಿಗೂ ಇದು ಪ್ರತಿ ಶನಿವಾರ ಭಾನುವಾರಗಳ Rejuvenating experience. ಇಲ್ಲಿನ್ನೂ ಕನಸುಗಳಿವೆ, ಕೈಗಡ ಕೊಡೋ ಖುಷಿಯ ಊಟೆಗಳಿವೆ, ಬದುಕಿಗೆ ಬಣ್ಣ ತುಂಬೋ ಕುಂಚಗಳಿವೆ. ನೋಡೋ ಕಣ್ಣು ಮಾತ್ರ ನಮಗಿರಬೇಕು, ಅಷ್ಟೋಂದು ಖುಷಿ ಕಟ್ಟಿಕೊಡೋ ಈ ಜಾಗಕ್ಕೊಂದ್ಸಲ ಬರ್ತೀರಲ್ವ? ಬೆಂಗಳೂರಂದ್ರೆ ಬರೀ ಮಾಲು, ಬ್ರಿಗೇಡ್, ಎಂ.ಜಿ ರಸ್ತೆಗಳಲ್ಲ, ಅದರಾಚೆಗೆ ಪ್ರತಿ ಬಡಾವಣೆಲೂ ನಾವು ನಮ್ಮೂರಿನ ಸೊಗಡು ಉಳಿಸಿಕೊಂಡಿದೀವಿ. . . ಕಷ್ಟದ ದಿನಗಳಲ್ಲೂ ನಮ್ಮ ತನವನ್ನ ಗೊತ್ತಿರದೇ ಕಾಯ್ವ ನಮ್ಮ ಈ ಬಂಧುಗಳಿದ್ದಾರೆ, ಚೆಂದದ ಹೂ ಮಾರುತ್ತಾ ಅಂದದ ತರಕಾರಿ ರಾಶಿಯಲ್ಲಿ ನಗುತ್ತ, ಬಾಳೆಲೆ, ವಿಳ್ಳೇದೆಲೆಗಳಲ್ಲಿ ಬದುಕಿಗೆ ಹಸಿರು ತುಂಬುತ್ತಾ. . . . . .. . . .

**ವಿಷಯ ವಿಶಿಷ್ಟ**

**ಸಣ್ಣ ಗ್ರಹವೊಂದಕ್ಕೆ ಭಾರತೀಯನ ಹೆಸರಿಟ್ಟ ನಾಸಾ:**

ಅಮೆರಿಕಾದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ನಾಸಾ' ಭಾರತೀಯ ಸಾಧಕರೊಬ್ಬರಿಗೆ ಅಪರೂಪದ ಗೌರವ ಸಲ್ಲಿಸಿದೆ. 1989 ರಲ್ಲಿ ನಾಸಾ ಪತ್ತೆಹಚ್ಚಿದ '5178 ಎನ್.ಓ. ಸಿಡಿ4' ಎಂಬ ಗ್ರಹಕ್ಕೆ ಪರಿಸರದ ಕುರಿತು ಮಹತ್ತ್ವದ ಸಂಶೋಧನೆ ಹಾಗೂ ಅಭಿಯಾನ ಕೈಗೊಂಡ ಕೇರಳದ ಪ್ರಾಣಿಶಾಸ್ತ್ರ ಪ್ರಾಧ್ಯಾಪಕ ಶ್ರೀ 'ಸೈನುದ್ದೀನ್ ಪಟ್ಟಾಯಿ' ಯವರ ಹೆಸರನ್ನು ನಾಮಕರಣ ಮಾಡುವ ಮೂಲಕ ನಾಸಾ ಈ ಭಾರತೀಯ ಸಾಧಕನಿಗೆ ಗೌರವ ಅರ್ಪಿಸಿದೆ. ನಾಸಾದ ಈ ಕಾರ್ಯ ಶ್ಲಾಘನೀಯ ಅಲ್ಲವೆ?







# ನಕ್ಸಲರ ಬೆನ್ನು ಹತ್ತಿ..................

**ಒಂದು ಕಡೆ ಮೂರು ಹೊತ್ತು ಕುಳಿತೇ ತಿಂದು ಮೂರು ತಲೆಮಾರು ಕಳೆದರೂ ಮುಗಿಯದ ಆಸ್ತಿ ಇರುವವರು, ಇನ್ನೊಂದೆಡೆ ಹೊತ್ತಿಗೂ ಗತಿಯಿಲ್ಲದೇ ಹಸಿವೆಯಿಂದ ಸಾಯುವವರು. ಇಂತಹ ಅಸಮಾನತೆಯ ಮೈಗೂಡಿಸಿಕೊಂಡಿರುವ ಸಮಾಜ ಎಷ್ಟು ದಿನ ಆರೋಗ್ಯಕರವಾಗಿ ನಿಲ್ಲಬಲ್ಲದು? ಈ ಶೋಷಣೆ ಆರ್ಥಿಕ ತಾರತಮ್ಯ, ಜಾತಿಯ ಮೇಲು ಕೀಳುಗಳನ್ನು ಯಾರು ಸರಿಪಡಿಸಬೇಕು?**

ನಕ್ಸಲ್‌ವಾದ ಸರಿಯೇ? ನಕ್ಸಲರು ಮಾಡುತ್ತಿರುವ ಹಿಂಸಾಚಾರ, ಅಮಾಯಕರ ಹತ್ಯೆಗಳು ಸರಿಯೇ? ತಪ್ಪೇ? ಎಂಬ ವಾದವನ್ನು ಬದಿಗಿಟ್ಟು ಈ ನಕ್ಸಲರ ಬಗ್ಗೆ ಯೋಚಿಸಿದರೆ ಅವರ ಬಗ್ಗೆ ಮರುಕವೆನ್ನಿಸುತ್ತದೆ.

ಬಹುತೇಕ ಪದವೀಧರರೇ ಆಗಿರುವ ಈ ಜನರೆಲ್ಲ ನಕ್ಸಲೈಟ್ ವಾದಕ್ಕೆ ಏಕೆ ಒಪ್ಪಿಕೊಂಡರು? ಸಮಾಜದ ಜನರಿಂದ ದೂರವಾಗಿ ಉಳಿದು, ಪೋಲಿಸರ ಕಣ್ಣು ತಪ್ಪಿಸಿ ಕಾಡಿನಲ್ಲಿ ಅಲೆಯುವ ಬದುಕನ್ನು ಯಾಕೆ ಆರಿಸಿಕೊಂಡರು? ಎಂಬ ಬಗ್ಗೆ ಗಂಭೀರ ಚಿಂತನೆ ನಡೆಸಬೇಕಾಗಿದೆ.

ಒಂದು ಕಡೆ ಮೂರು ಹೊತ್ತು ಕುಳಿತೇ ತಿಂದು ಮೂರು ತಲೆಮಾರು ಕಳೆದರೂ ಮುಗಿಯದ ಆಸ್ತಿ ಇರುವವರು, ಇನ್ನೊಂದೆಡೆ ಹೊತ್ತಿಗೂ ಗತಿಯಿಲ್ಲದೇ ಹಸಿವೆಯಿಂದ ಸಾಯುವವರು. ಇಂತಹ ಅಸಮಾನತೆಯ ಮೈಗೂಡಿಸಿಕೊಂಡಿರುವ ಸಮಾಜ ಎಷ್ಟು ದಿನ ಆರೋಗ್ಯಕರವಾಗಿ ನಿಲ್ಲಬಲ್ಲದು? ನಾವೆಲ್ಲರೂ ಸಮಾಜದ ಬಗ್ಗೆ ಚಿಂತನೆ ನಡೆಸುವಾಗ ಸಮಾಜದ ಕಟ್ಟುಪಾಡುಗಳನ್ನು ಮೀರಿ ನಿಲ್ಲುವ, ಸಮಾಜದ ವಿರುದ್ಧ ಸಿಡಿದೇಳುವ ಜನರನ್ನು ದೂಷಿಸುತ್ತೇವೆ. ಆದರೆ ಆ ಜನರ ಆಕ್ರೋಶದ ಹಿಂದಿರುವ ಪರಿಸ್ಥಿತಿಗಳನ್ನು ಸಮಾಜದಲ್ಲಿ ಅವರು ಸಹಿಸಿಕೊಂಡ ಶೋಷಣೆಗಳನ್ನು ನಾವು ಗಮನಿಸುವುದೇ ಇಲ್ಲ. ಬಹುಷಃ ಡಕಾಯಿತ ರಾಣಿ ಫೂಲನ್ ದೇವಿಯ ಕ್ರೂರ ಜೀವನದ ಹಿಂದಿರುವ ನೋವಿನ ಬಗ್ಗೆ ನಾವು ಯೋಚಿಸುವ ಬದಲು ಅವಳು ಚಂಬಲ್ ಕಣಿವೆಯಲ್ಲಿ ಎಷ್ಟು ಜನರನ್ನು ಕೊಂದಳು, ಎಷ್ಟು ಶ್ರೀಮಂತ ವರ್ಗದವರನ್ನು ದೋಚಿದಳು ಎನ್ನುವುದನ್ನು ಮಾತ್ರ ಗಮನಿಸುತ್ತೇವೆ. ಒಂದು ಹೆಣ್ಣು ಈ ಮಟ್ಟದ ಕೊಲೆ ದರೋಡೆಗಳನ್ನು ಮಾಡಲು ಕಾರಣ ಅವಳ ಜೀವನದಲ್ಲಿ ನಡೆದ ಅಮಾನವೀಯ ಘಟನೆಗಳೇ ಕಾರಣ ಎನ್ನುವುದು ಅವಳ ಜೀವನ ಚರಿತ್ರೆ ಓದಿದವರಿಗೆ ಮಾತ್ರ ಮನದಟ್ಟಾಗುತ್ತದೆ.

ಈ ಶೋಷಣೆ ಆರ್ಥಿಕ ತಾರತಮ್ಯ, ಜಾತಿಯ ಮೇಲು ಕೀಳುಗಳನ್ನು ಯಾರು ಸರಿಪಡಿಸಬೇಕು? ಸರಿಪಡಿಸುವ ಸ್ಥಾನದಲ್ಲಿರುವ ಸರ್ಕಾರದಲ್ಲಿನ ಜನಪ್ರತಿನಿಧಿಗಳು ಭಾಗಶಃ ಶ್ರೀಮಂತ ವರ್ಗದವರೇ! ಅವರೇ ಕಪ್ಪು ಹಣವನ್ನು ಮುಚ್ಚಿಟ್ಟು ಜೀವಿಸುತ್ತಿರುವಾಗ ಈ ತುತ್ತಿಗೂ ಗತಿಯಿಲ್ಲದ ಬಡವರನ್ನು ಯಾರು ಕೇಳಬೇಕು?

ಇದೆಲ್ಲದರ ಮಧ್ಯೆ ನಕ್ಸಲರು ಹಿಡಿದಿರುವ ದಾರಿ ಸರಿ ಎನ್ನುವ ವಾದ ನನ್ನದಲ್ಲ. ಹಾಗೆ ಎಲ್ಲವನ್ನೂ ಸರ್ಕಾರಗಳೇ ಮಾಡಬೇಕೆನ್ನುವುದೂ ಸರಿಯಲ್ಲ. ಸಮಾಜದ ಡೊಂಕುಗಳನ್ನು ತಿದ್ದುವ ಕಾರ್ಯದಲ್ಲಿ ಪ್ರತಿಯೊಬ್ಬನು ಭಾಗಿಯಾದಾಗ ಮಾತ್ರ ಇಂತಹ ತಾರತಮ್ಯಗಳು ಶೋಷಣೆಗಳು ನಿಲ್ಲಲು ಸಾಧ್ಯ. ನಕ್ಸಲರು ತಮ್ಮ ಕೈಯಲ್ಲಿ ಹಿಡಿದಿರುವ ಬಂದೂಕಿಗೆ ನಾವೂ ಕಾರಣರು ಎನ್ನುವುದು ನನ್ನ ಅಭಿಪ್ರಾಯ. ನೀವೇನಂತಿರಿ?

**– ಸಹಜ ಸ್ಪಂದನ, ಉತ್ತರ ಕನ್ನಡ**

**ವಿಷಯ ಅಮೆರಿಕದಲ್ಲಿ ಬಾಬಾ ರಾಮದೇವ್ ಯೋಗ ಕೇಂದ್ರ ವಿಶೇಷ**

ಜಗದ್ವಿಖ್ಯಾತ ಯೋಗ ಗುರು, ಹರಿದ್ವಾರ ಪತಂಜಲಿ ಯೋಗಪೀಠದ ಬಾಬಾ ರಾಮದೇವ್ ಅಮೆರಿಕದ ಟೆಕ್ಸಾಸ್‌ನಲ್ಲಿ 60 ಎಕರೆ ವಿಸ್ತೀರ್ಣದ ಜಾಗದಲ್ಲಿ ನೂತನ ಯೋಗ, ಆಯುರ್ವೇದ ಚಿಕಿತ್ಸೆ ಮತ್ತು ಸಂಶೋಧನಾ ಕೇಂದ್ರ ಸ್ಥಾಪಿಸಲಿದ್ದಾರೆ. ಈಗಾಗಲೇ ಚೀನಾದಲ್ಲಿ ಒಂದು ಯೋಗ ಕೇಂದ್ರವನ್ನು ಸ್ಥಾಪಿಸಿರುವ ರಾಮದೇವ್ ಭಾರತೀಯ ಯೋಗದ ಮಹತ್ವವನ್ನು ಜಗತ್ತಿಗೇ ಸಾರುವ ಮಹತ್ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.